CC-O. In Public Domain. Digitized by eGangotri

# ಡಿ. ದೇವರಾಜ ಅರಸು

ಎನ್. ಎಸ್. ರಾಮಪ್ರಸಾದ್

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

507

# ಡಿ. ದೇವರಾಜ ಅರಸು

ಎನ್. ಎಸ್. ರಾಮಪ್ರಸಾದ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

D. DEVARAJA URS—a brief life sketch of D. Devaraja Urs, written by N. S. Rama Prasad and Published by G. K. Ananthram for IBH Prakashana, Gandhinagar, Bangalore–560 009.

ಬೆಲೆ : ರೂ. 2–00

Copyright © 1983 by the publisher

ಮುಖಪುಟ : ಸೂರಿ
ಛಾಯಾಚಿತ್ರಗಳು : ಎಸ್. ಆರ್. ಪುಟ್ಟಸ್ವಾಮಿ

ಮೊದಲ ಮುದ್ರಣ : 1983. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು–560009
ಮುದ್ರಕರು : ಎಚ್ ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ಬೆಂಗಳೂರು 560 054

Sri Vidyabharathi Book Centre, Sringeri

CC-O. In Public Domain. Digitized by eGangotri

# ಡಿ. ದೇವರಾಜ ಅರಸು

## 'ದಶಕ'ದ ಸೃಷ್ಟಿಕರ್ತ

ಸವೆಸಿದ ಹಾದಿ ಎಂದೂ ಸುಗಮವಾಗಿರಲಿಲ್ಲ. ಆದರೂ ಕಲ್ಲಹಳ್ಳಿ ದೊಡ್ಡಮನೆ ದೇವರಾಜ ಅರಸು ಎಂದೂ ಅಂಜಲಿಲ್ಲ. ಜಗ್ಗದೆಯೇ ಬಗ್ಗದೆಯೇ ಮುಂದೆ ಸಾಗಿದರು; ಮೇಲೇರಿದರು; ಏರಿದಷ್ಟೇ ರಭಸದಿಂದ ಕೆಳಗಿಳಿದರು. ನೆನಪು ಮಾಸದಂತಹ ಹೆಜ್ಜೆಯ ಗುರ್ತುಗಳನ್ನು ಬಿಟ್ಟು ನಡೆದರು.

1915ರ ಆಗಸ್ಟ್ 20 ಮತ್ತು 1982ರ ಜೂನ್ 6 — ಈ ಎರಡು ದಿನಗಳ ನಡುವಿನ, 67 ವರ್ಷಕ್ಕೆ ತುಸುವೇ ಕಡಿಮೆಯ ಬಾಳ್ವೆಯೊಂದು ಇತಿಹಾಸದ ಸಾಮಗ್ರಿಯಾಯಿತು. ಆಧುನಿಕ ಕರ್ನಾಟಕದ ಇತಿಹಾಸದಲ್ಲಿ 'ಮುನ್ನೆಗೆತದ ದಶಕ'ದ ಸೃಷ್ಟಿಕರ್ತನೆನಿಸಿದರು.

## ದೊಡ್ಡಮನೆ ಅರಸರು

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಿಂದ ಬೆಂಗಳೂರು ವಿಧಾನಸೌಧದ ಮೂರನೇ ಉಪ್ಪರಿಗೆಯ ವರೆಗೆ ದೇವರಾಜ ಅರಸು ನಡೆದ ಅವಧಿ ಬಹು ದೀರ್ಘ. ಕಲ್ಲಹಳ್ಳಿ ಕನ್ನಡನಾಡಿನ ಕುಗ್ರಾಮಗಳಲ್ಲಿ ಒಂದು – ಇಂದಿಗೂ. ಆ

Sri Vidyabharathi Book Centre, Sringeri

CC-O. In Public Domain. Digitized by eGangotri


ಹಳ್ಳಿಯ ಮಣ್ಣಿನ ಮಗನೊಬ್ಬ 'ದೊರೆ'ಯ ಬಾಳ್ವೆ ನಡೆಸಿದರೂ ಅದಿನ್ನೂ ಹಳ್ಳಿಯೇ. ಆ ಪುಟ್ಟ ಗ್ರಾಮದಲ್ಲಿ ದೇವರಾಜ ಅರಸರ ಮನೆಯೇ 'ದೊಡ್ಡಮನೆ.' ಆದ್ದರಿಂದಲೇ ಅವರ ಹೆಸರಿಗೆ ಅಂಟಿಕೊಂಡ ಕೀರ್ತಿ ದೊಡ್ಡಮನೆ ದೇವರಾಜ ಅರಸು. ಐದಾರು ವರ್ಷಕಾಲ ಮಂತ್ರಿಯಾಗಿದ್ದು ಏಳೆಂಟು ವರ್ಷಕಾಲ ಮುಖ್ಯಮಂತ್ರಿ ಆಗಿದ್ದವರ ಮನೆ – ಹೇಗಿದೆ ಎಂದು ನೋಡಲು ಹೋದವರಿಗೆ ನಿರಾಸೆ ಮೂಡಿಸುವ ಹಳ್ಳಿಯ ಹತ್ತಂಕಣದ ಮನೆ. ಆ ಊರಿಗೆ ಅದೇ ದೊಡ್ಡಮನೆ.

ಕನ್ನಡನಾಡಿನಲ್ಲಿ ಒಡೆಯರ ಆಡಳಿತ ಆರಂಭವಾದ ಮೇಲೆ ರಾಜ ಪರಿವಾರದವರು ಸ್ಥಳೀಯರೊಡನೆ ಸಂಬಂಧ ಬೆಳೆಸಿದಾಗ ಹುಟ್ಟಿಕೊಂಡ ಹೊಸ ಕುಲ 'ಅರಸು.' ರಾಜಪರಿವಾರದ ಬಂಧುತ್ವ, ಹಳ್ಳಿ ಊರುಗಳಲ್ಲಿ ಬದುಕು. ಮೇಲೇರಲು ರಾಜರ ಕೃಪಾದೃಷ್ಟಿ ಬೇಕು. ಕೆಳಗಿಳಿಯಲು ಅಡ್ಡವಾಗುತ್ತಿದ್ದ ಅಭಿಮಾನ. ಇದೊಂದು ಬಗೆಯ ತ್ರಿಶಂಕು ಸ್ವರ್ಗ. ರಾಜಮನೆತನದ ಗೌರವ ಕಾಯ್ದುಕೊಳ್ಳಲು ತಮ್ಮ ದೀನಾವಸ್ಥೆಯನ್ನು ಮರೆಮಾಚಿಕೊಂಡು ಮರ್ಯಾದೆಯ ಮಧ್ಯಮವರ್ಗವಾಗಿ ಬಾಳಬೇಕಾದ ಇಕ್ಕಟ್ಟು. ರಾಜರ ಔದಾರ್ಯದ ಕೊಡುಗೆಗಳು ಇರಲಿಲ್ಲವೆಂದಲ್ಲ; ಆದರೆ ಅದನ್ನು ಆಶ್ರಯಿಸಿ ಪಡೆಯಬೇಕಿತ್ತು. ರಾಜರು ಅಪೇಕ್ಷಿಸುತ್ತಿದ್ದುದೂ ಅಷ್ಟೆ. ಆಶ್ರಿತರಿದ್ದರಲ್ಲವೇ 'ಆಶ್ರಿತವತ್ಸಲ' ನೆಂಬ ಮೆರೆತಕ್ಕೆ ಅವಕಾಶ !

## ಕೃಷಿಕ ಮನೆತನ

ದೇವರಾಜ ಅರಸರದು ಕೃಷಿಕ ವೃತ್ತಿ ಅವಲಂಬಿಸಿದ ಮನೆತನ. ಉಣಲು ಸಾಲುವಷ್ಟೇ ಭೂಮಿ. ತಂದೆ ಊರಿಗೆ ಮುಖಂ

Sri Vidyabharathi Book Centre, Sringeri

CC-O. In Public Domain. Digitized by eGangotri


ಡರು. ಅವರ ಮಾತಿಗೆ ಸುತ್ತಮುತ್ತಲಿಲ್ಲ ಮನ್ನಣೆ. ಗ್ರಾಮೀಣದ ತೊಡಕುಗಳ ಪರಿಹಾರಕ್ಕೆ, ವ್ಯಾಜ್ಯದ ಇತ್ಯರ್ಥಕ್ಕೆ 'ಅರಸು'ಗಳೇ ಆಗಬೇಕು. ಯಾವುದೇ ಸನ್ನದ್ದಿನಿಂದ ಪಡೆದ ಹಕ್ಕಿನ ಅಧಿಕಾರವಲ್ಲ ; ಆಳುತನ ಮತ್ತು ಸನ್ನಡತೆಯಿಂದ ಬೆಳೆಸಿಕೊಂಡಿದ್ದ ಜನಾನುರಾಗ. ದೇವರಾಜ ಅರಸರಿಗೆ ಇದೇ ಪಿತ್ರಾರ್ಜಿತ ಆಸ್ತಿ.

ಒಂಬತ್ತರ ಪ್ರಾಯದ ದೇವರಾಜನಿಗೆ ಪಿತೃವಿಯೋಗವಾದಾಗ ತಮ್ಮ ಕೆಂಪರಾಜನಿಗಿನ್ನೂ ಆರು ವರ್ಷ. ತಾನು ಮತ್ತು ವೃದ್ಧ ಅಜ್ಜಿ, ಈ ಕುಟುಂಬದ ತಲೆಯಾಳು ಪಟ್ಟ ಹೆಗಲಿಗೇರಿತ್ತು. ಓದಿನ ಹಂಬಲವೂ ಬೆಳೆದಿತ್ತು. ಮೊದಲು ಮೈಸೂರಿನಲ್ಲಿ ಅನಂತರ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ಚಿಕ್ಕಪ್ಪನ ಮನೆ, ಅರಸು ಬೋರ್ಡಿಂಗ್ ಹೋಮ್‌ಗಳಲ್ಲಿ ಇದ್ದು, ಓದುವಾಗ ಇವೆರಡನ್ನೂ ಬಿಟ್ಟು ಬಾಡಿಗೆ ಕೊಠಡಿಯಲ್ಲಿ ಅನ್ನ ಬೇಯಿಸಿಕೊಂಡು ದಿನ ಸವೆಸಿದ್ದೂ ಉಂಟು.

ದೇವರಾಜ ಅರಸರನ್ನು ನೋಡಿದ್ದವರು ನಂಬಲು ಸಾಧ್ಯವಿಲ್ಲದಂತಹ ಬಾಲ್ಯದ ದಿನಗಳು. ಕಲ್ಲಹಳ್ಳಿಯೂ ಆ ದಿನಗಳಲ್ಲಿ ಮಲೇರಿಯಾ ವ್ಯಾಧಿಗೆ ಬಲಿ. ಇದರ ದೆಸೆಯಿಂದ ಬಳಲಿ, ಔಷಧೋಪಚಾರವಿಲ್ಲದ ದೇವರಾಜ ಆಗ ತೀರ ದುರ್ಬಲ ವ್ಯಕ್ತಿ. ಗೆಳೆಯನೊಬ್ಬ ಹೊಡೆದು ಬಾರಿಸಿದಾಗ ಅದಕ್ಕೆ ತಕ್ಕ ಇದಿರೇಟು ಹಾಕಲಾಗದಿದ್ದ ದಯನೀಯ ಸ್ಥಿತಿ. "ದುರ್ಬಲತೆಯನ್ನು ಕಳೆದುಕೊಳ್ಳಬೇಕು. ಬಲಗಳಿಸಿಕೊಳ್ಳಬೇಕು. ಬಲಶಾಲಿಯಾಗಿ ದುರ್ಬಲರನ್ನು ಕಾಡುವ ಬದಲು ಕಾಯುವ ಕೆಲಸ" ಮಾಡಬೇಕೆಂಬ ಛಲ ಮೂಡಿದ್ದೂ ಆಗಲೆ.

ಛಲ–ನಿಶ್ಚಲಗಳೇ ಅರಸರ ಕುಲ. ಬಾಗದೆ ಬಾಳುವುದು ಅವರ ಮನೋಧರ್ಮ. ನಿರ್ಬಲತೆಯನ್ನು ಕಳೆದುಕೊಳ್ಳುವ ನಿರ್ಧಾರ ಮಾಡಿದ ದೇವರಾಜನಿಗೆ ವ್ಯಾಯಾಮದ ಗೀಳು

Sri Vidyabharathi Book Centre, Sringeri

CC-O. In Public Domain. Digitized by eGangotri


ಹತ್ತಿತು. ಈ ಗೀಳು ಅವನನ್ನು ಗರಡಿ ಮನೆಗೂ ನಡೆಸಿತು. ವ್ಯಾಯಾಮ ಮಾಡುವ ಉತ್ಸಾಹದಲ್ಲಿ ಕೈ ಊನವಾಗುವ ಪ್ರಸಂಗ ಬಂದರೂ ಅದನ್ನು ಬಿಡದ ಛಲ. ನರಳಿದರೂ ನಿಲ್ಲಿಸದ ನಿರ್ಧಾರ. ಎಡೆಬಿಡದ ಈ ಸಾಧನೆಯ ಸಾಫಲ್ಯ – ಕಾಲೇಜಿನಲ್ಲಿ ಮೂರು ವರ್ಷ ಸತತವಾಗಿ ಕುಸ್ತಿಯ ಮಲ್ಲ. ಬಗೆಬಗೆ ಪಟ್ಟುಗಳನ್ನು ಲೀಲಾಜಾಲವಾಗಿ ಹಾಕಲು ಕಲಿತಿದ್ದರಿಂದಲೇ ಮುಂದೆ ಅವರು ಎದುರಾಳಿಯ ಎದುರು ಜಗ್ಗಲೇ ಇಲ್ಲ. ರಾಜಕಾರಣದಲ್ಲೂ 'ಪೈಲ್ವಾನ್ ಅರಸು' ಎಂದೇ ಖ್ಯಾತರಾದರು.

## ಸ್ವಾಭಿಮಾನ – ಗ್ರಾಮಪ್ರೇಮಿ

ದೇಹದ ದೌರ್ಬಲ್ಯ ಕಳೆದುಕೊಂಡು, ಉನ್ನತ ವಿದ್ಯಾಭ್ಯಾಸ ಪಡೆಯುತ್ತಿದ್ದ ಯುವಕ ದೇವರಾಜನಿಗೆ ಆಗ ಸುಭಾಸ್‌ಚಂದ್ರ ಬೋಸರು ಆರಾಧ್ಯವ್ಯಕ್ತಿ. ವೈಚಾರಿಕವಾಗಿ ಮಹಾತ್ಮಾ ಗಾಂಧಿಯವರಿಗೆ ಶರಣಾದರೂ, ಸುಭಾಸ್‌ಚಂದ್ರ ಬೋಸರ ಪ್ರಯತ್ನ ವಿಲ್ಲದಿದ್ದರೆ ಸ್ವಾತಂತ್ರ್ಯ ಸುಗಮವಾಗುತ್ತಿರಲಿಲ್ಲವೆಂಬುದೇ ಅವರ ನಂಬಿಕೆ.

ವಿಜ್ಞಾನ ಕಲಿತು ಪದವೀಧರನಾದ ಮೇಲೆ ಸಹಜವಾಗಿಯೇ ಭವಿಷ್ಯ ಕುರಿತು ಚಿಂತೆ. ಅರಸು ಮನೆತನಕ್ಕೆ ಸೇರಿದ್ದು, ಆ ಕಾಲಕ್ಕೆ ಅಸಾಧಾರಣವೆನಿಸುವಷ್ಟು ವಿದ್ಯಾರ್ಹತೆ ಪಡೆದ ಯುವಕನಿಗೆ ಸರ್ಕಾರದಲ್ಲಿ ನೌಕರಿ ದೊರಕುವುದೇನೂ ದುಸ್ತರವಿರಲಿಲ್ಲ. ನೌಕರಿಯಷ್ಟೇ ಅಲ್ಲ, ದೊಡ್ಡ ಹುದ್ದೆಯೇ ದೊರಕಲು ಅವಕಾಶವಿತ್ತು. ಆದರೆ ರಾಜರನ್ನು ಇಲ್ಲವೇ ಅವರ ಆಪ್ತವಲಯವನ್ನು ಆಶ್ರಯಿಸಬೇಕಿತ್ತು. ಸ್ವತಂತ್ರ ಮನೋವೃತ್ತಿಯ, ಸ್ವಾಭಿಮಾನಿ ಯುವಕನಿಗೆ ಇದು ಅಸಾಧ್ಯವಾಗಿತ್ತು. ಹಿತೈಷಿಗಳ ಮಾತು ಪಥ್ಯವೆನಿಸ

Sri Vidyabharathi Book Centre, Sringeri

CC-O. In Public Domain. Digitized by eGangotri



ಪದವೀಧರ

Sri Vidyabharathi Book Centre, Sringeri

CC-O. In Public Domain. Digitized by eGangotri


ಲಿಲ್ಲ. ವಿದ್ಯಾವಂತ ಯುವಕರು ಹಳ್ಳಿಗೆ ಹೋಗಿ ಬೇಸಾಯದ ಬದುಕನ್ನು ಅವಲಂಬಿಸುವುದು ಆಗಲೂ ಅಪರೂಪ ವ್ಯವಹಾರ ವಾಗಿತ್ತು. ದೇವರಾಜ ಅರಸು ಹಳ್ಳಿಗೆ ಹೋಗಿ ನೆಲೆಸಿದರು. ಬಾಲ್ಯದಿಂದಲೇ ಮೈಗೂಡಿಸಿಕೊಂಡಿದ್ದ ಕಸುಬನ್ನೇ ಅವಲಂಬಿಸಿ ದರು.

## 'ಎಮ್ಮೆ ಹಾಲಿನ ಅರಸರು'

ದೇವರಾಜರನ್ನು ತೀರ ಸಮೀಪದಿಂದ ಬಲ್ಲ ಹಳ್ಳಿಗರು ಅವರನ್ನು ಕರೆಯುತ್ತಿದ್ದ ಹೆಸರು. ಆಗತಾನೇ ಕರೆದ ಎಮ್ಮೆ ಹಾಲಿಗೆ ಬಿಸಿ ಕಾಫಿ ಕಷಾಯ ಸೇರಿಸಿ ಕುಡಿಯುವುದೆಂದರೆ ದೇವ ರಾಜರಿಗೆ ಬಲು ಇಷ್ಟ. ಎಮ್ಮೆ ಹಾಲು ಮಂದ. ಅದನ್ನು ಕುಡಿ ದವರೂ ಹಾಗೇ – ಮಂದ – ನಿಧಾನ ಎಂಬುದು ಹಳ್ಳಿಗಾಡಿನಲ್ಲಿ ನಂಬಿಕೆ. ಮುಂದೆಯೂ ಅವರು ಈ ನಿಧಾನ ಗತಿಯನ್ನು ಬಿಟ್ಟು ಕೊಡಲಿಲ್ಲ. ಎಚ್ಚರದ ಹೆಜ್ಜೆ ಇಡುವುದೇ ರೂಢಿಯಾಯಿತು.

ಸಾಮಾನ್ಯವಾಗಿ ತಿಳುವಳಿಕೆ ಇರುವಂತೆ ಹುಣಸೂರಿಗೆ ಐದು ಮೈಲು ದೂರದ ಕಲ್ಲಹಳ್ಳಿ ದೇವರಾಜರ ತೌರೂರು ಅಲ್ಲ ; ಕೃಷ್ಣರಾಜನಗರ ತಾಲ್ಲೂಕಿನ ಬೆಟ್ಟದಪುರ. ಅಲ್ಲಿ ದೊಡ್ಡ ದನದ ಕೆಂಪರಾಜ ಅರಸು ಎಂದರೆ ಅಸುಪಾಸಿನಲ್ಲೆಲ್ಲ ಪ್ರಸಿದ್ಧ. ಅವರೇ ದೇವರಾಜರ ತಾತ, ಹೈನುಗಾರಿಕೆಗೆ ಪ್ರಸಿದ್ಧವಾದ ಮನೆತನ. ಮಗ, ಬೆಟ್ಟದಪುರದ ದೇವರಾಜ ಅರಸು.

ಕಲ್ಲಹಳ್ಳಿಯ ಗೌರಮ್ಮಣ್ಣಿ – ಪದ್ಮನಾಭರಾಜ ಅರಸರಿಗೆ ಒಬ್ಬಳೇ ಮಗಳು. ಬೆಟ್ಟದಪುರದ ದೇವರಾಜ ಅರಸರನ್ನು ಅಳಿಯನನ್ನಾಗಿ ಮಾಡಿಕೊಂಡರು. ದುರ್ದೈವ, ಆಕೆಯ ಹೊಟ್ಟೆ ಯಲ್ಲಿ ಹುಟ್ಟಿದ ಗಂಡು ಮಗುವೂ ಕಾಲವಾಯಿತು. ಮಗಳೂ

Sri Vidyabharathi Book Centre, Sringeri

CC-O. In Public Domain. Digitized by eGangotri



ವಿಧಿವಶಳಾದಳು. ವಂಶವೇ ಮುಗಿದುಹೋಗುವ ಸಂದರ್ಭ. ಆಗ ಅಳಿಯ ಬೆಟ್ಟದಪುರದ ದೇವರಾಜ ಅರಸರಿಗೇ ತಮ್ಮ ತಂಗಿಯ ಮಗಳು ದೇವೀರಮ್ಮಣ್ಣಿಯನ್ನು ಕೊಟ್ಟು ಮದುವೆ ಮಾಡಿ ಅಳಿಯ – ಮಗಳನ್ನು ಮನೆಯಲ್ಲೇ ಇಟ್ಟುಕೊಂಡರು, ಗೌರಮ್ಮಣ್ಣಿ.

ಗೌರಮ್ಮಣ್ಣಿ – ದೇವರಾಜರ ದೊಡ್ಡ ಅಜ್ಜಿ. ದೇವೀರಮ್ಮಣ್ಣಿ ತಾಯಿ. ದೇವರಾಜರ ಒಡ ಹುಟ್ಟಿದ ಸೋದರರಿಬ್ಬರು. ಅವರಲ್ಲಿ ಉಳಿದುಕೊಂಡವರೆಂದರೆ ಕೆಂಪರಾಜ ಅರಸು ಒಬ್ಬರೇ. ಹೀಗಾಗಿ ಅವರಿಬ್ಬರೇ ಆ ಮನೆತನದ ಮಕ್ಕಳಾದರು. ದೇವರಾಜರನ್ನು ಬೆಳೆಸಿ ಸಾಕಿದ ಮೇಲೆ 16ರ ಪ್ರಾಯದಲ್ಲಿ ಅಜ್ಜಿ ಗೌರಮ್ಮಣ್ಣಿ ಮೊಮ್ಮಗ ದೇವರಾಜರನ್ನೇ ದತ್ತು ಸ್ವೀಕಾರ ಮಾಡಿದಾಗ ಕಲ್ಲಹಳ್ಳಿ ಅವರ ಹೊಸ ತೌರೂರು ಆಯಿತು.

ಹಳ್ಳಿಯಲ್ಲೇ ಹುಟ್ಟಿ ಬೆಳೆದ ವ್ಯಕ್ತಿಗೆ ಆ ಬದುಕಿನ ಭಾಗವಾಗುವುದೇನೂ ಕಷ್ಟವಾಗಿರಲಿಲ್ಲ. ಖುಷ್ಕಿ ಬೇಸಾಯ – ಮನೆತುಂಬ ದನ ಕರು. ಆದರೂ ಅದರ ವಾಣಿಜ್ಯ ಪ್ರಯೋಜನ ಪಡೆಯುವ ತಿಳಿವಿಲ್ಲ. ಹೀಗಾಗಿ ಕೈತುಂಬ ಹಣವಿಲ್ಲ. ಉಣಲು ದಾರಿದ್ರ್ಯವೂ ಇಲ್ಲ. ಆದರೂ ವಿದ್ಯಾವಂತನಾದ ತರುಣನಿಗೆ ಹಳ್ಳಿಯ ಬದುಕು ಬಲುಪ್ರಿಯವಾಯಿತು. ಬಿಡುವಿನ ಸಮಯವೆಲ್ಲ ದನಗಳ ಹಿತಕ್ಕೆ ಮೀಸಲು. ಬೀಜದ ಹೋರಿಗಳನ್ನು ಬೆಳೆಸುವುದು, ಅವುಗಳಿಗೆ ಮಾಲೀಸು ಮಾಡಿ, ಪುಷ್ಟಿಕರ ಆಹಾರ ತಿನ್ನಿಸಿ ಜಾತ್ರೆಗಳಿಗೆ ಅಟ್ಟಿಕೊಂಡು ಹೋಗಿ ಪುರಸ್ಕಾರ ಗಳಿಸುವುದು, ಉಳುವ ಎತ್ತುಗಳ ಜೋಡಿ ಹಾಕುವುದು, ಊರ ಜನಗಳ ಜಗಳಗಳ ಇತ್ಯರ್ಥಗಳಲ್ಲಿ ತೊಡಗಿದ್ದ ಯುವಕನಿಗೆ ಕಾಡಿನಲ್ಲಿ ಬೇಟೆಯಾಡುವುದು ಒಂದು ಗೀಳು. ಹುಲಿ – ಕಾಡುಹಂದಿಗಳನ್ನು ಕೊಂದು ಮೆರವಣಿಗೆ ಮಾಡಿಸಿಕೊಂಡದ್ದೂ ಉಂಟು. ಹುಣಸೂ

Sri Vidyabharathi Book Centre, Sringeri

CC-O. In Public Domain. Digitized by eGangotri



ರಿಗೆ ಹೋಗಬೇಕಾದರೂ ಕಾಲ್ನಡಿಗೆಯೇ ಗತಿ. ಶಾಸಕರಾಗುವ ವರೆಗೆ ಬೇಸಾಯ, ಹೈನುಗಾರಿಕೆ, ಹಳ್ಳಿಗಳ ಒಡನಾಟ, ಅವರೊಡನೆ ಆತ್ಮೀಯ ಸಂಬಂಧ. ಕೆಲವು ಕಾಲವಾದ ಮೇಲೆ ಹುಣಸೂರಿನಲ್ಲಿ ಕಾರ್ಯಭಾರ ಹೆಚ್ಚಿ, ಓಡಾಟ ಅತಿಯಾದಾಗ ಒಂದು ಮೋಟಾರ್ ಬೈಸಿಕಲ್ ಕೊಂಡರು. ಸಂಜೆ ವೇಳೆ ಮನೆಯ ಜಗಲಿ ಮೇಲೆ ಕುಳಿತು ಕಾವ್ಯವಾಚನ. ಅದಕ್ಕೆ ಹಳ್ಳಿಗರೇ ಶ್ರೋತೃಗಳು. ರಾಗಲಯಬದ್ಧವಾಗಿ ಭಾರತ – ಭಾಗವತ ಓದುವ ಕಲೆ ಸಾಧಿಸಿದ್ದ ದೇವರಾಜ ಅರಸು "ರಾಜಕಾರಣಕ್ಕೆ ಇಳಿಯದೆ ಸಂಗೀತದಲ್ಲಿ ಮುಂದುವರೆದಿದ್ದರೆ ಒಳ್ಳೆ ಸಂಗೀತಗಾರ ಆಗುತ್ತಿದ್ದೆ" ಎಂದು ಅಭಿಮಾನ ತಳೆದದ್ದೂ ಉಂಟು.

ಪಿರಿಯಾಪಟ್ಟಣದ ಸಮೀಪದ ಕೋಗಿಲೂರಿನ ಚಿಕ್ಕಮ್ಮಣ್ಣಿ ಮನೆ ತುಂಬಿದ ಮೇಲೆ ದೇವರಾಜ ಅರಸು ಒಂದು ರೀತಿಯಲ್ಲಿ ಗೃಹಕೃತ್ಯದಲ್ಲಿ ನಿರ್ಲಿಪ್ತ. ವ್ಯವಸಾಯ, ಪಶುಪಾಲನೆ ಮಕ್ಕಳ ವಿದ್ಯಾಭ್ಯಾಸದ ಹೊಣೆಯೆಲ್ಲ ಚಿಕ್ಕಮ್ಮಣ್ಣಿಯವರದಾಯಿತು. ಆಗಲೇ ಮೈಗಂಟಿಸಿಕೊಂಡಿದ್ದ ಜನಹಿತಕಾರ್ಯಕ್ಕೆ ದೇವರಾಜರು ಪೂರ್ಣಕಾಲದ ದುಡಿಮೆಗಾರರಾದರು.

ಮನೆಯ ತೊಡಕು – ತೊಂದರೆಗಳನ್ನು ಮುಂದಿಟ್ಟಾಗ "ಆಯಿತು" ಎಂದು ಹೇಳಿ ತಮ್ಮ ಕೆಲಸದ ಹೊರೆಯನ್ನು ಇಳಿಸಿಕೊಂಡ ನಂತರವೇ ಅದಕ್ಕೆ ಗಮನ ಕೊಡುತ್ತಿದ್ದರು. ಆಗಲೂ ಚಿಕ್ಕಮ್ಮಣ್ಣಿಯವರಿಗೆ "ನೀವು ತೀರ್ಮಾನ ಮಾಡಿ" ಎಂದು ಒಪ್ಪಿಸಿಬಿಡುತ್ತಿದ್ದರು.

ಹೊತ್ತು ಗೊತ್ತಿಲ್ಲ. ತಮ್ಮ ವಸ್ತುಗಳನ್ನು ಜೋಪಾನ ಮಾಡಿಕೊಳ್ಳುವ ಎಚ್ಚರವೂ ಇಲ್ಲ. ಯಾವಾಗೆಂದರೆ ಆಗ ಮನೆಗೆ ಬಂದು, ಜತೆಯಲ್ಲೇ ನಾಲ್ಕಾರು ಜನರನ್ನು ಕರೆತಂದು "ಎಲ್ಲರಿಗೂ ಎಲೆ ಹಾಕಿ" ಎಂದುಬಿಡುತ್ತಿದ್ದರು. ಇದೊಳ್ಳೆ ಪೀಕಲಾಟದ

Sri Vidyabharathi Book Centre, Sringeri

CC-O. In Public Domain. Digitized by eGangotri



ಧರ್ಮಪತ್ನಿ ಶ್ರೀಮತಿ ಚಿಕ್ಕಮ್ಮಣ್ಣಿಯವರೊಂದಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri


ಸ್ಥಿತಿ. ಅಷ್ಟು ಜನರಿಗೆ ಅಡಿಗೆ ಇಲ್ಲ ಎನ್ನುವ ಹಾಗಿಲ್ಲ. ಹೀಗಾಗಿ ಸದಾ ನಾಲ್ಕೈದು ಜನರ ನಿರೀಕ್ಷೆಯಲ್ಲಿ ಅಡಿಗೆ ಮಾಡಿಟ್ಟುಕೊಳ್ಳುವುದೇ ರೂಢಿಯಾಯಿತು.

## ದೊಡ್ಡ ಮನೆತನ

ಆಳುಕಾಳುಗಳು ಇದ್ದೂ ಅನ್ನವೆಂದರೇ ಒಂದು ವಿಶೇಷ ವೆನಿಸುತ್ತಿತ್ತು. ಹೀಗಿರುವಾಗ ಮನೆಗೆ ಭತ್ತ ಬೆಳೆಯಬೇಕೆಂಬ ನಿರ್ಧಾರ ಮಾಡಿ ಹುಣಸೂರಿನ ಸಮೀಪದಲ್ಲಿ ಜಮೀನು ಕೊಂಡು ಭತ್ತ ಬೆಳೆಯತೊಡಗಿದರು. "ಆ ಜಮೀನು ಕೊಂಡಿದ್ದೇ ಒಂದು ಕಥೆ. ಮಾರಲು ತವಕಿಸುತ್ತಿದ್ದ ರೈತನಿಗೆ ಮುಂಗಡವಾಗಿ ಹಣ ಕೊಟ್ಟುಬಿಟ್ಟರು. ಕಾಗದ ಬರೆಸಿಕೊಳ್ಳಿ ಎಂದು ಅವನ ತಗಾದೆ. 'ಇರಲಿ ತಾಳಪ್ಪ' ಎಂದೇ ತಿರುಗಿದ ಅಪ್ಪಾಜಿ. ಕೊನೆಗೂ ಅವನ ಜೀವಮಾನದಲ್ಲಿ ಒರೆಸಿಕೊಳ್ಳಲಿಲ್ಲ. ಆ ಜಮೀನನ್ನೂ ಇಡಿಯಾಗಿ ಉಳಿಸಿಕೊಳ್ಳಲಿಲ್ಲ. ಪ್ರತಿ ಚುನಾವಣೆಯ ಕಾಲದಲ್ಲೂ 2 – 4 ಎಕರೆ ಮಾರಿದ ಮೇಲೆ ಈಗ ಉಳಿದಿರುವುದು ಐದು ಎಕರೆ ಮಾತ್ರ. ಅದೂ ಅಮ್ಮನ ಹಠದಿಂದ."

1941—ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಹೂಡಲು ನಿರ್ಧರಿಸಿತು. ಹುಣಸೂರು ಕ್ಷೇತ್ರದ ಅಭ್ಯರ್ಥಿಯ ಆಯ್ಕೆ ಒಂದು ತೊಡಕಾಗಿತ್ತು. ಆ ಊರಿನ ಹಿರಿಯ ವಕೀಲರಿಬ್ಬರು ಶ್ರೀನಿವಾಸ ಅಯ್ಯಂಗಾರ್ ಮತ್ತು ಜಿ. ಕೃಷ್ಣಮೂರ್ತಿ. ರಾಜ್ಯದಲ್ಲಿ ಕಾಂಗ್ರೆಸ್ ಆಂದೋಳನದ ಪ್ರವರ್ತಕರ ಪಂಕ್ತಿಗೆ ಸೇರಿದವರು. ಆದರಿಂದಾಗಿ ಕಷ್ಟನಷ್ಟಗಳನ್ನು ಅನುಭವಿಸಿದವರು. ಆ ಹಿರಿಯರಿಬ್ಬರ ದೃಷ್ಟಿ – ತಮ್ಮ ತಾಲ್ಲೂಕಿನವನೇ ಆದ ಈ ವಿದ್ಯಾವಂತ ಯುವಕನ

Sri Vidyabharathi Book Centre, Sringeri

CC-0. In Public Domain. Digitized by eGangotri


ಮೇಲಿತ್ತು. ವರ್ಚಸ್ವಿ, ಧೈರ್ಯಶಾಲಿ, ಕಾರ್ಯನಿಷ್ಠ ಮತ್ತು ಸರ್ಕಾರಿ ಹುದ್ದೆಗೆ ಹಾತೊರೆಯದ ಸ್ವಾಭಿಮಾನಿ, ರಾಷ್ಟ್ರಪ್ರೇಮಿ– ಈ ಭಾಗದ ಜನರ ಪ್ರತಿನಿಧಿಯಾಗಬಾರದೇಕೆಂದು ಚಿಂತಿಸಿದರು. ಕರೆಕಳುಹಿಸಿದರು. ಮನವೊಲಿಸಿದರು. 1941ರಲ್ಲಿ ದೇವರಾಜರಿಗೆ 25ರ ಪ್ರಾಯ. ಆಗಲೇ ಅವರು ಪ್ರಜಾಪ್ರತಿನಿಧಿ ಸಭೆಯ ಅತಿ ಕಿರಿಯ ಸದಸ್ಯ.

ಪಕ್ಷದ ಮಟ್ಟದಲ್ಲಿ ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಆಗಿನ ದಿನಗಳಲ್ಲಿ ಎಷ್ಟು ಕಟ್ಟುನಿಟ್ಟುಗಳಿದ್ದವೆಂಬುದನ್ನು "ಎಲ್ಲವನ್ನೂ ಗಮನಿಸುತ್ತಾ ಇದ್ದೆ. ಪಕ್ಷದ ನಾಯಕರೆಂದರೆ ದೂರದಿಂದಲೇ ಗೌರವ ಸಲ್ಲಿಸುತ್ತಿದ್ದ ಕಾಲ. ಪಕ್ಷದ ಸಭೆಯಲ್ಲಿ ಅವಕಾಶ ಕೊಟ್ಟಾಗ ಮಾತಾಡಬೇಕು. ಅಸೆಂಬ್ಲಿಯಲ್ಲಿ ನಾಯಕರು ಅವಕಾಶ ಕೊಟ್ಟಾರೇ ಎಂದು ಹಾತೊರೆಯಬೇಕಾಗಿತ್ತು. ಅವಕಾಶ ಸಿಗುವುದೇ ಕಷ್ಟವಾಗಿದ್ದ ಕಾಲ ಅದು. ಈಗ ಹಾಗೇನಿಲ್ಲ. ಯಾರು ಬೇಕಾದರೂ ಎದ್ದು ಏನು ಬೇಕಾದರೂ ಮಾತಾಡುತ್ತಾರೆ. ಅಧ್ಯಕ್ಷರು, ಕೂತುಕೊಳ್ಳಿ ಎಂದರೂ ಇಲ್ಲ, ಬೆಲ್ಲು ಹೊಡೆದರೂ ಇಲ್ಲ"ವೆಂದು ನೆನಪು ಮೆಲಕು ಹಾಕುವಾಗ ದೇವರಾಜ ಅರಸು ಶಿಸ್ತು ಸಡಿಲವಾಗುತ್ತಿರುವ ಬಗ್ಗೆ ಖಿನ್ನರಾಗುತ್ತಿದ್ದರು.

ಕಾಂಗ್ರೆಸ್ಸಿನಲ್ಲಿ ಈಗಿನಂತೆ ಆಗಲೂ ಗುಂಪುಗಳಿದ್ದವು. ದೇವರಾಜ ಅರಸು ದಿವಂಗತ ಹಿರಳ್ಳಿ ದಾಸಪ್ಪನವರ ಬೆಂಬಲಿಗರು. 1945ರಲ್ಲಿ ಪುನಃ ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ಬಂತು. ಮನೆಯಲ್ಲಿ ಕಷ್ಟನಷ್ಟಗಳು ಹೆಚ್ಚಿದ್ದವು. ಹಣಕಾಸಿನ ಬಿಕ್ಕಟ್ಟು ಕಾಡುತ್ತಿತ್ತು. ಚೇವಣಿಗೆ 150 ರೂಪಾಯಿ ತೆರಲು ಸಾಧ್ಯವಿರಲಿಲ್ಲ. ಸುಮ್ಮನೆ ಹಳ್ಳಿಯಲ್ಲಿ ಉಳಿದು ಬೇಸಾಯದಲ್ಲಿ ಗಮನ ನೀಡಬೇಕೆಂದು ಅರಸು ನಿರ್ಧರಿಸಿದ್ದಾಗಿತ್ತು. ನಾಯಕರಿಗೂ ತಮ್ಮ ನಿರ್ಧಾರವನ್ನು ತಿಳಿಸಿದ್ದೂ ಆಗಿತ್ತು. ಅಭ್ಯರ್ಥಿಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri


ಗೊತ್ತುಮಾಡುವ ಹೊಣೆ ನಿರ್ವಹಿಸುತ್ತಿದ್ದವರು ಸಾಹುಕಾರ ಚನ್ನಯ್ಯ. ಹುಣಸೂರು ಕ್ಷೇತ್ರಕ್ಕೆ ಹೊಸ ಅಭ್ಯರ್ಥಿಯನ್ನು ಗೊತ್ತುಮಾಡಿದ್ದೂ ಆಗಿತ್ತು. ಆದರೆ ನಾಮಪತ್ರ ಸಲ್ಲಿಕೆಗೆ ಎರಡು ದಿನ ಮೊದಲು ಆ ಹುರಿಯಾಳು ಕಣ್ಮರೆಯಾದರು. ಕೈಗೇ ಸಿಗಲಿಲ್ಲ.

"ಆ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಚುನಾವಣೆಗೆ ನಿಲ್ಲುವುದಕ್ಕೆ ಒಂದು ರೀತಿಯ ಅಂಜಿಕೆ, ಯಾಕೆ ಸರ್ಕಾರದ ವಿರೋಧ ಕಟ್ಟಿಕೊಳ್ಳಬೇಕು ಎಂಬ ದಿಗಿಲು. ಆ ಕಾರಣದಿಂದ ಹೊಸ ಹುರಿಯಾಳು ಕೊನೆಗಳಿಗೆಯವರೆಗೆ ಸುಮ್ಮನಿದ್ದು, ನಾನು ನಿಲ್ಲಲಾರೆನೆಂದು ಹೇಳಿ ತಪ್ಪಿಸಿಕೊಂಡು ಬಿಟ್ಟರು."

ಕಾಂಗ್ರೆಸ್ಸಿಗೆ ಅಭ್ಯರ್ಥಿಯೇ ಇಲ್ಲದ ಪರಿಸ್ಥಿತಿ. ಚನ್ನಯ್ಯನವರು ಸ್ವಲ್ಪ ಕಾಲ ದಿಙ್ಮೂಢರಾಗಿದ್ದರು. ಅಂತೂ ಒಂದು ನಿರ್ಧಾರ ಕೈಗೊಂಡು "ನೇರವಾಗಿ ಹುಣಸೂರಿಗೆ ಬಂದರು. ಹಿತೈಷಿಗಳ ಮನೆಯಲ್ಲಿ ತಂಗಿ ನನ್ನನ್ನು ಕರೆಸಿದರು. ನಾನು ಒಲ್ಲೆನೆಂದರೆ ಬಿಡುವ ಹಾಗೇ ಇಲ್ಲ." ಪಕ್ಷದ ಪ್ರತಿಷ್ಠೆಯ ಪ್ರಶ್ನೆ ಎದುರಾದಾಗ, ವೈಯಕ್ತಿಕ ಕಷ್ಟವನ್ನು ಕಡೆಗಣಿಸಿ ಸ್ಪರ್ಧಿಸಲು ಒಪ್ಪಿಸಿದರು. ಜಯಗಳಿಸಿದ್ದೂ ಆಯಿತು."

ದೇವರಾಜ ಅರಸರ ಜೀವನದಲ್ಲಿ ಇದೊಂದು ಮಹತ್ವದ ಘಟನೆ. ಹೀಗಾಗದೆ ಹೋಗಿದ್ದರೆ ರಾಜಕೀಯ ರಂಗದಿಂದ ಅವರು ಒಮ್ಮೆಲೇ ದೂರ ಸರಿದುಬಿಡುತ್ತಿದ್ದರೇನೋ ! ಕಾಡಿಗೆ ನುಗ್ಗಿ ಮಾಯವಾಗಬಯಸಿದ್ದ ಮದ್ದಾನೆಯೊಂದನ್ನು ಮಣಿಸಿ, ಪಳಗಿಸಿ ಜನದೇಗುಲದ ಕಾವಲುಗಾರನ ಕಾಯಕಕ್ಕೆ ತೊಡಗಿಸಿದ ಕೀರ್ತಿ ಯಂತೂ ಚನ್ನಯ್ಯನವರದಾಯಿತು.

Sri Vidyabharathi Book Centre, Sringeri.

CC-O. In Public Domain. Digitized by eGangotri



## ಕಳೆದ ಕಂಟಕ

1952 – ಭಾರತ ಗಣತಂತ್ರವಾದ ಮೇಲೆ ನಡೆದ ಪ್ರಥಮ ಮಹಾ ಚುನಾವಣೆ. ಮೈಸೂರು ರಾಜ್ಯದಲ್ಲಿ, ಕೆಂಗಲ್ ಹನುಮಂತಯ್ಯ ಕಾಂಗ್ರೆಸ್ ಅಧ್ಯಕ್ಷ. ದೇವರಾಜ ಅರಸು ಕೆಂಗಲ್ಲರ ಒಡನಾಡಿ. ಚನ್ನಯ್ಯನವರಿಗೆ ಒಲ್ಲದ ವ್ಯಕ್ತಿ. ಆಗಿನ ಮುಖ್ಯಮಂತ್ರಿ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ, ಟಿ. ಮರಿಯಪ್ಪನವರೆಲ್ಲ ಚನ್ನಯ್ಯನವರ ಹಿಂಬಾಲಕರು. ಕೆಂಗಲ್ಲರು ಶಿಫಾರಸ್ ಮಾಡಿದ ಅಭ್ಯರ್ಥಿಗಳಿಗೆ ಟಿಕೀಟು ಕೊಡಬಾರದೆಂದು ಪಟ್ಟುಹಿಡಿದರು. ಫಲಕಾರಿಯಾಗಲಿಲ್ಲ. ದೇವರಾಜ ಅರಸು ಅಭ್ಯರ್ಥಿಯಾದರು. ಮೈಸೂರು ನಗರವನ್ನೂ ಒಳಗೊಂಡು ಜಿಲ್ಲೆಯಲ್ಲಿ 12 ಕ್ಷೇತ್ರಗಳು. ಎಲ್ಲ ಕ್ಷೇತ್ರಕ್ಕೂ ಸ್ಪರ್ಧೆ ಹೂಡಿದ್ದ ಕಾಂಗ್ರೆಸ್ ಜಯಗಳಿಸಿದ್ದು ಮೂರರಲ್ಲಿ ಮಾತ್ರ. ಕೆಂಗಲ್ಲರ ಅಭಿಮಾನಿಗಳು ಆರಿಸಿ ಬರದಂತೆ ಕಾಂಗ್ರೆಸ್ಸಿನ ಪ್ರತಿ ಪಾಳಯ ಪ್ರಬಲವ್ಯೂಹ ರಚಿಸಿತ್ತು. ಆದರೂ ಗೆದ್ದು ಬಂದದ್ದು "ಭೂಕಂಪದಲ್ಲಿ ಬದುಕಿಬಂದ ಹಾಗೆ, ಕಂಟಕವೊಂದು ಕಳೆದ ಹಾಗೆ" ಅನಿಸಿದ್ದನ್ನು ದೇವರಾಜರೇ ಹಲವು ಬಾರಿ ಹೇಳಿದ್ದರು. 1957ರ ಚುನಾವಣೆಯಲ್ಲಿ ಯಾವ ಆತಂಕವೂ ಇರಲಿಲ್ಲ. ನಿರಾಯಾಸದ ಗೆಲವು ದಕ್ಕಿತು.

52 ರಿಂದ 62ರ ವರೆಗೆ ಶಾಸನ ಸಭಾ ಸದಸ್ಯರಾಗಿದ್ದರೂ ದೇವರಾಜ ಅರಸರಿಗೆ ಶಾಸನ ಸಭೆಯ ಸಮಿತಿಗಳ ಪೈಕಿ ಒಂದರಲ್ಲೂ ಸದಸ್ಯರಾಗಿರಲು ಅವಕಾಶ ದೊರಕಲಿಲ್ಲ. ಇದಕ್ಕಾಗಿ ಅವರೇನೂ ಚಿಂತಿಸಲಿಲ್ಲ. ಆದರೆ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂಬ ಬಯಕೆ ಹೊತ್ತ ನಿಜಲಿಂಗಪ್ಪನವರ ಸರ್ಕಾರ (1957) ಸಮಸ್ಯೆಯನ್ನು ಸವಿವರವಾಗಿ ಪರಿಶೀಲಿಸಲು ವಿಧಾನಮಂಡಲದ ಉಭಯ ಸದನಗಳಿಂದ ಕೂಡಿದ ಸೆಲೆಕ್ಟ್ ಕಮಿಟಿ ರಚಿಸಿತು. ಭೂಸುಧಾ

Sri Vidyabharathi Book Centre, Sirsi

CC-O. In Public Domain. Digitized by eGangotri



ರಣೆ, ಸಾಮಾಜಿಕ ನ್ಯಾಯದ ಒಂದು ಪ್ರಬಲ ಅಸ್ತ್ರ ; ಅದನ್ನು ಯಶಸ್ವಿಗೊಳಿಸಿದರೆ ಒಡ ಬೇಸಾಯಗಾರ ಅನಿಶ್ಚಿತತೆಯಿಂದ ಮುಕ್ತಿ ಪಡೆಯುತ್ತಾನೆ ; ತಾನು ಬೆವರುಣಿಸುವ ಭೂಮಿಗೆ ಒಡೆಯನಾಗಿ ಸ್ವಾಭಿಮಾನ ತಳೆಯುತ್ತಾನೆ ; ಕಡುಬಡವನ ಕೈಗಷ್ಟು ಶಕ್ತಿ ಬರುತ್ತದೆ ಎಂಬುದು ದೇವರಾಜರಿಗೆ ಆಗಲೇ ತಿಳಿದಿತ್ತು. ಆದ್ದರಿಂದಲೇ ಶಾಸನ ಕಲಾಪವನ್ನು ಸಫಲಗೊಳಿಸಲು 'ಸೆಲೆಕ್ಟ್' ಸಮಿತಿಯ ಸದಸ್ಯರಾಗಲು ಅರಸು ಅಪೇಕ್ಷಿಸಿದರು. ಆದರೆ ಪ್ರಬಲ ಪಿತೂರಿ ಅಡ್ಡಿ ಆಯಿತು: "ಇಂಥವನು ಇಲ್ಲಿದ್ದರೆ ಕಷ್ಟ"ವೆಂದು ಅವಕಾಶ ನಿರಾಕರಿಸಿಬಿಟ್ಟರು.

ಸಂಬಳ ಸಾರಿಗೆಗಳಿಲ್ಲದ ಹುದ್ದೆ – ಪಕ್ಷದ ಪ್ರಧಾನಕಾರ್ಯದರ್ಶಿ ಹುದ್ದೆ–ಅಪೇಕ್ಷಿಸಿದರು. ಈಡೇರಲಿಲ್ಲ. ಸರ್ಕಾರಿ ಹುದ್ದೆಗಾಗಲಿ ಮಂತ್ರಿಪದವಿಗಾಗಲಿ ಅರ್ಜಿ ಹಾಕದಿದ್ದ ದೇವರಾಜ ಅರಸು ಅಪೇಕ್ಷಿಸಿದ್ದು ಈ ಎರಡೇ ಸೇವಾ ಅವಕಾಶ. ಭೂಸುಧಾರಣೆಯ ಶಾಸನದ ಜಂಟಿ ಸೆಲೆಕ್ಟ್ ಸಮಿತಿ (ಜಂಟಿ ಸಮಿತಿ) ಸದಸ್ಯತ್ವ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿಗಳ ಸ್ಥಾನ – ಎರಡೂ ತಿರಸ್ಕೃತವಾದವು.

## ನಿರ್ಭೀತ

1962 ಹುಣಸೂರು ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ ಎದುರಾಳಿಯೇ ಇಲ್ಲವಾಗಿತ್ತು. ದೇವರಾಜ ಅರಸರಿಗೆ ಅವಿರೋಧ ಆಯ್ಕೆಯ ಗೌರವ ಲಭಿಸಿತು. ಅದೇ ಚುನಾವಣೆಯಲ್ಲಿ ನಿಜಲಿಂಗಪ್ಪ ಹೊಸದುರ್ಗ ಕ್ಷೇತ್ರದಿಂದ ಅನಿರೀಕ್ಷಿತ ಪರಾಭವ ಅನುಭವಿಸಿದರು. ಆದರೆ ಕಾಂಗ್ರೆಸ್ ಅಧ್ಯಕ್ಷರಾಗಿ ಅವರು ಆಯ್ಕೆ ಮಾಡಿದ ಅಭ್ಯರ್ಥಿಗಳ ಪೈಕಿ ಬಹುಮಂದಿ ಗೆಲವು ಪಡೆದಿದ್ದರು.

Sri Vidyabharathi Book Gallery, Bangalore

CC-0. In Public Domain. Digitized by eGangotri


ಪಕ್ಷಕ್ಕೆ ಸರ್ಕಾರ ರಚಿಸಲು ಸಾಕಷ್ಟು ಬಹುಮತ ಸಿಕ್ಕಿತ್ತು. ನಾಯಕ ನಿಜಲಿಂಗಪ್ಪನವರು ಚುನಾವಣೆಯಲ್ಲಿ ಸೋತಿದ್ದರೂ ಅವರೇ ಶಾಸಕ ದಳದ ನಾಯಕರಾಗಬೇಕು; ಪಕ್ಷದ ಸರ್ಕಾರ ರಚಿಸಬೇಕು ; ಮುಖ್ಯಮಂತ್ರಿಗಳಾಗಬೇಕೆಂಬ ಬಹುಮತವೂ ವ್ಯಕ್ತವಾಯಿತು. ನಿಜಲಿಂಗಪ್ಪನವರ ಬೆಂಬಲಿಗರ ಈ ಪಟ್ಟು, ದೇವರಾಜ ಅರಸರಿಗೆ ಹಿತಕರವೆನಿಸಲಿಲ್ಲ. ಜನತಾ ವಿಶ್ವಾಸದ ಅಗ್ನಿಪರೀಕ್ಷೆಯಲ್ಲಿ ಸೋತವರು ಮುಖ್ಯಮಂತ್ರಿಯಾಗುವುದೆಂದರೇ ನರ್ಥ ?– ಜನಮತದ ತಿರಸ್ಕಾರ. ಇಂಥ ವರ್ತನೆಯಿಂದ ಮುಖ್ಯಮಂತ್ರಿಪದವಿಗೆ ಅಗತ್ಯವಾದ ನೈತಿಕ ಶಕ್ತಿ ಇರುವುದಿಲ್ಲ;ಇದು ಸಲ್ಲ ಎಂಬುದು ದೇವರಾಜ ಅರಸರ ನಿಲುವು. ಆದರೆ ಆಗಿನ ಪ್ರಬಲ ನಾಯಕ ನಿಜಲಿಂಗಪ್ಪನವರಿಗೆ ಇದನ್ನು ಯಾರು ಹೇಳಬೇಕು ? ಬಹಿರಂಗವಾಗಿ ಹೇಳಲು ಅಂಜಿಕೆ.

ಅಂಜದೆ ನೇರವಾಗಿ ನಿಜಲಿಂಗಪ್ಪನವರಲ್ಲಿ ಹೋಗಿ "ನೀವು ಕಾಂಗ್ರೆಸ್ ಶಾಸಕದಳದ ನಾಯಕರಾಗಿ ಆಯ್ಕೆ ಹೊಂದುವುದು, ಅನಂತರ ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸುವುದು ಸರಿಯಲ್ಲ. ಇದರಿಂದ ಪದವಿಗೆ ಶಕ್ತಿ ಬರೋದಿಲ್ಲ. ಅಧಿಕಾರದಲ್ಲಿ ಕೂತ ನಿಮಗೂ ಆತ್ಮಬಲ ಇರೋದಿಲ್ಲ. ಆದ್ದರಿಂದ ನೀವು ನಾಯಕರಾಗಬಾರದು" ಎಂದು ನೇರವಾಗಿ ಹೇಳಿಬಂದರು.

ಅಂತೂ ಅಗೋಚರ ಹಸ್ತ ತನ್ನ ಕೈವಾಡ ನಡೆಸಿತು. ಅದೃಷ್ಟ ಕೈಗೂಡಿತು. ದೇವರಾಜರಿಗೆ ಮಂತ್ರಿಮಂಡಲಕ್ಕೆ ಸೇರುವಂತೆ ಆಹ್ವಾನ ಬಂತು. ಒಂದುಗೂಡಿ ಕೆಲಸ ಮಾಡುವ ಅಪೇಕ್ಷೆಯನ್ನು ನಿಜಲಿಂಗಪ್ಪನವರೇ ವ್ಯಕ್ತಗೊಳಿಸಿದ ಮೇಲೆ ಬಿಂಕಕ್ಕೆಲ್ಲಿ ಆಸ್ಪದ ? ಸಾರಿಗೆ ಮಂತ್ರಿಯಾದರು. ಕಾರ್ಮಿಕ ಖಾತೆ, ಪ್ರವಾಸೋದ್ಯಮಗಳೂ ಜತೆಗೂಡಿದವು. ಅನಂತರ ಆದ ಮಾರ್ಪಾಟಿನಂತೆ ಪಶುಸಂಗೋಪನೆ, ವಾರ್ತಾ ಮತ್ತು ಪ್ರಸಾರ.

Sri Vidyabharathi Book Centre, Sringeri

CC-O. In Public Domain. Digitized by eGangotri


ಮಾನುಗಾರಿಕೆ ಮತ್ತು ರೇಷ್ಮೆ ಉದ್ಯಮಗಳ ಸಚಿವರೂ ಆದರು. ಯಾವುದೇ ಹುದ್ದೆ ವಹಿಸಲಿ, ಅದರ ತಲಸ್ಪರ್ಶಿ ತಿಳಿವು ಪಡೆದು ಸಮಸ್ಯೆಗಳ ಆಳಕ್ಕಿಳಿಯುವುದು ದೇವರಾಜರ ಜಾಯಮಾನ. ತಿಳಿವಿನ ಮೇಲ್ಪದರದಲ್ಲೇ ತೊಳಲಾಡುವ ತೋರಿಕೆ ಅವರದ್ದಲ್ಲ. ಆಳವಾದ ತಿಳಿವು ಪೂರ್ವಾಪರ ವಿಮರ್ಶೆಯ ನಂತರ ಒಂದು ನಿರ್ಧಾರಕ್ಕೆ ಬಂದರೆಂದರೆ ಅಲ್ಲಿ ಅವರು ಅಚಲ. ವಾದಕ್ಕೆ ಪ್ರತಿವಾದ ಹೂಡುವ, ಎದುರಾಳಿಯನ್ನು ತಮ್ಮ ವಾದ ಮಂಡನೆಯಿಂದಲೇ ಮಣಿಸುವ ಪ್ರತಿವಾದಿ ಭಯಂಕರ ದೇವರಾಜ ಅರಸು. ಖಂಡಿತವಾದಿಯಾದ್ದರಿಂದ 'ಲೋಕ' ವಿರೋಧಿ !

## ಫಲಿಸದ ನಿರಾಕರಣೆ

ಐದು ವರ್ಷ ಕಳೆಯಿತು. 1967ರ ಚುನಾವಣೆ ಸನ್ನಿಹಿತವಾಯಿತು. ನಿಜಲಿಂಗಪ್ಪನವರ ಸಂಪುಟದಲ್ಲಿದ್ದ 25 ಮಂತ್ರಿಗಳ ಪೈಕಿ 24 ಮಂತ್ರಿಗಳಿಗೆ ಸ್ಪರ್ಧಿಸಲು ಅವಕಾಶ ನಿರಾಯಾಸವಾಗಿ ಸಿಕ್ಕಿತು. ಪ್ರದೇಶ ಕಾಂಗ್ರೆಸ್ ಹಂತದಲ್ಲಿ ಟಿಕೆಟ್ ಪಡೆಯಲಾಗದಿದ್ದ ಮಂತ್ರಿ ದೇವರಾಜರೊಬ್ಬರೇ. ಪ್ರದೇಶ ಚುನಾವಣೆ ಸಮಿತಿಯ ಸದಸ್ಯತ್ವಕ್ಕೆ ನಿಜಲಿಂಗಪ್ಪನವರ ಅಭೀಪ್ಸೆಕ್ಕೆ ವಿರುದ್ಧವಾಗಿ ಸ್ಪರ್ಧಿಸಿದ್ದ ಮುನಿಸೂ ಇತ್ತು. ಜತೆಗೆ ಗುಂಪು ರಾಜಕಾರಣದ ಕೈವಾಡ. ಅಂತರಂಗದ ಈ ವಿರೋಧಿಯನ್ನು ಪ್ರೋತ್ಸಾಹಿಸುವುದು ಬೇಡವೆಂಬ ಸನ್ನಾಹ ನಡೆದಿತ್ತು.

ಅರಸರ ಅಂತರಂಗದ ಮಿತ್ರರು ವರಾತ ಹೂಡಿದರು — "ಹೋಗಿ, ಆಗಿರುವ ಅನ್ಯಾಯವನ್ನು ಹೇಳಿ." ಇದಕ್ಕೆ ಉತ್ತರವೂ ಸಿದ್ಧವಾಗಿತ್ತು : "ಛೇ ನಾನು ಜೀವಮಾನದಲ್ಲಿ ಒಂದು ಬಾರಿಯೂ

Sri Vidyabharathi Book Centre, Sringeri

CC-O. In Public Domain. Digitized by eGangotri



ಟಿಕೀಟು ಕೊಡಿ ಅಂತ ಯಾರನ್ನೂ ಕೇಳಿಲ್ಲ. ಈಗಲೂ ಕೇಳಲ್ಲ. ಕೊಡದಿದ್ದರೆ ಕಲ್ಲಹಳ್ಳಿಗೆ ಹೋಗ್ತೀನಿ."

ನಾಮಪತ್ರ ಸಲ್ಲಿಸಲು ಒಂದೆರಡು ವಾರಗಳಿವೆ ಅನ್ನುವಾಗ ಕವಿದಿದ್ದ ಕಾರ್ಮುಗಿಲು ಕರಗಿತ್ತು. ಕಾಂಗ್ರೆಸ್ ಟಿಕೆಟ್ ಸಿಕ್ಕಿತು. ಎಂದಿನಂತೆ ಗೆಲವು ನಿರಾಯಾಸವಾಗಿ ದೊರಕಿತು. ನಿಜಲಿಂಗಪ್ಪ ಮತ್ತೆ ಮುಖ್ಯಮಂತ್ರಿಯಾದರು. ವಿವಶರಾಗಿ ದೇವರಾಜರಿಗೂ ಅಧಿಕಾರ ಹಂಚಿಕೊಟ್ಟರು.

ಪುನಃ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ ಆ ಹುದ್ದೆಯಲ್ಲಿ ಬಹಳ ಕಾಲ ಇರಲು ಅವಕಾಶವಾಗಲಿಲ್ಲ. ಅವರು ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದರು. ಕೆಲವು ತಿಂಗಳ ನಂತರ ಮುಖ್ಯ ಮಂತ್ರಿ ಪದವಿಯನ್ನು ಬಿಟ್ಟುಕೊಟ್ಟರು. ತಮ್ಮ ನಿಕಟವರ್ತಿ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ನಿರ್ಧರಿಸಿದ್ದರು. ಬಹುಕಾಲದಿಂದ ಸುಪ್ತಾವಸ್ಥೆಯಲ್ಲಿದ್ದ ಅಸಮಾಧಾನದ ಅಗ್ನಿಪರ್ವತ ಸ್ಫೋಟಿಸಿತು. ತಾರತಮ್ಯ, ಸ್ವಜನಾನುರಾಗಗಳ ವಿರುದ್ಧ ಬಂಡೇಳಲು ಅರಸು ಸನ್ನದ್ಧರಾದರು. ಪಕ್ಷದ ನಾಯಕರ ಆಯ್ಕೆಯಲ್ಲಿ ಸೆಣೆಸಿದರು. ವಿಫಲರಾದರು. ಕ್ರಮೇಣ ನಿಜಲಿಂಗಪ್ಪನವರ ಬೆಂಬಲಿಗರ ವಿರೋಧಿಗಳ ಧುರೀಣರೂ ಆದರು.

## ಹೊಸ ತಿರುವು

1969ರಲ್ಲಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲೇ ಎ. ಐ. ಸಿ. ಸಿ. ಅಧಿವೇಶನ ನಡೆಯಿತು. ಕಾಮರಾಜ್, ಎಸ್. ಕೆ. ಪಾಟೀಲ್, ನಿಜಲಿಂಗಪ್ಪ, ಸಂಜೀವರೆಡ್ಡಿ, ಸಿ.ಬಿ.ಗುಪ್ತ, ಅತುಲ್ಯ ಘೋಷರು ಸಂಪ್ರದಾಯವಾದಿಗಳ ಮುಂದಾಳುತನ ವಹಿಸಿದ್ದರೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಅನಿವಾರ್ಯವಾಗಿ ಅವರಿಗೆ ಮೇಲುಗೈ ಬಿಟ್ಟುಕೊಡಲು ಒಲ್ಲದ ಇಂದಿರಾ ಪ್ರಗತಿಪರ ದೃಷ್ಟಿಯ ಮೂಲ ನಾಯಕರ ಮುಂದಾಳು ತನ ವಹಿಸಿದ್ದರು. ಆಗಲೇ ಭಾವೀ ರಾಷ್ಟ್ರಪತಿಯ ಸ್ಥಾನಕ್ಕೆ ಹುರಿಯಾಳನ್ನು ನಿರ್ಧರಿಸಬೇಕಿತ್ತು. ನಿಜಕ್ಕೂ ಅದೊಂದು ಐತಿ ಹಾಸಿಕ ಅಧಿವೇಶನ.

ಅಧಿವೇಶನ ನಡೆದ ಮೂರೂ ದಿನಗಳ ಕಲಾಪವನ್ನು ಎವೆ ಇಕ್ಕದೆ ಕಿವಿ ತೆರೆದು ಗಮನಿಸಿ ಮನಸ್ಸಿಗೆ ತುಂಬಿಕೊಳ್ಳುತ್ತಿದ್ದ ಜೀವ ಮೂಲೆಯಲ್ಲಿ ಕೂತದ್ದು ಯಾರ ಗಮನಕ್ಕೂ ಬರಲಿಲ್ಲ. ಅದು, ಪ್ರತಿ ನಾಯಕತ್ವ ಮೊಳೆಯುತ್ತಿದ್ದ ಸಂಕ್ರಮಣ ಕಾಲ. ಅತೃಪ್ತತೆ ಮೇಲುಗೈ ಸಾಧಿಸಿತ್ತು. ಭವಿಷ್ಯ ನಿಶ್ಚಿತವಿರಲಿಲ್ಲ. ಸಂಪ್ರದಾಯನಿಷ್ಠರ ಅವಕೃಪೆಯಂತೂ ಸಿದ್ಧಿಸಿತ್ತು. ಪ್ರತಿ ನಾಯಕತ್ವ ಓಲೈಸುತ್ತಿದ್ದ ಪ್ರಗತಿಪರ ವಿಚಾರಧಾರೆಯನ್ನು ಒಹು ಕಾಲದಿಂದ ಹೃದಯದಲ್ಲಿ ಇಟ್ಟುಕೊಂಡು ಪೋಷಿಸುತ್ತಿದ್ದ, ಸಕಾಲಕ್ಕಾಗಿ ಸಾವಧಾನದಿಂದ ಕಾಯುತ್ತಿದ್ದ ಜೀವಕ್ಕೆ ನವಚೇತನ ದೊರೆತಂತಾಯಿತು. ಸಾಂಪ್ರದಾಯಕ ನಾಯಕತ್ವದ ವಿರುದ್ಧ ರಾಜ್ಯದಲ್ಲಿ ಬಂಡಾಯದ ಧ್ವಜ ಎತ್ತಿ ಹಿಡಿದ ಧೀಮಂತಿಕೆ ಅರಸರದಾಯಿತು. ತನ್ನ ನಿಜದ ನೇರಕ್ಕೆ ನಡೆವ ನಿಶ್ಚಲತೆಯಿಂದ ದೇವರಾಜ ಅರಸು ನವ ನಾಯಕತ್ವದ ಪಂಕ್ತಿಯಲ್ಲಿ ಎಡೆ ಪಡೆದರು. ತನ್ನ ಕಸುಬನ್ನು ಒಯಲುಗೊಳಿಸುವ ಕಾಲಯೋಗ ಅವರದ್ದಾಗಿತ್ತು. ಅಲ್ಲಿಂದ ಮುಂದೆ ಒಂದು ದಶಕ ಪರ್ಯಂತ ದೇವರಾಜ ಅರಸು ಊರ್ಧ್ವಮುಖ ಯಾತ್ರೆಯನ್ನು ನಡೆಸಿದರು. ಪಳಗಿದ ಪಟುವಿನಂತೆ ಕೀರ್ತಿಪರ್ವತಾರೋಹಣ ಮಾಡಿದರು. ಈ ಅವಧಿ ರಾಜ್ಯದ ಜಡ್ಡುಗಟ್ಟಿದ ಸಂಪ್ರದಾಯನಿಷ್ಠ, ಪಾಳೆಯಗಾರಿಕೆಯ ರಾಜಕೀಯಕ್ಕೆ ಹೊಸ ತಿರುವು ಕೊಟ್ಟಿತು. ಈ ಹೊಸ ಮಾರ್ಗದ ಹರಿಕಾರರಾದರು ದೇವರಾಜ ಅರಸು.

Sri Vidyabharathi Book Centre, Singeri

CC-O. In Public Domain. Digitized by eGangotri



ರಾಜ್ಯದಲ್ಲಿ ಸ್ಥಾಪಿತ ನಾಯಕತ್ವದ ವಿರುದ್ಧ ಸೆಟೆದು ನಿಂತಿದ್ದ ದೇವರಾಜ ಅರಸರನ್ನು ಗುರ್ತಿಸುವುದು ರಾಷ್ಟ್ರನಾಯಕರಿಗೂ ಅನಿವಾರ್ಯವಾಗಿತ್ತು. ಅಂದಿನ ಅದ್ವಿತೀಯ ನಾಯಕರೆದುರು ನಿಲ್ಲುವ ಬೆನ್ನುಹುರಿ ಇದ್ದವರೇ ಅತ್ಯಲ್ಪ. ಅವರ ಪೈಕಿ ದೇವರಾಜರೊಬ್ಬರಲ್ಲಿ ಮಾತ್ರ ರಾಜಕಾರಣಿಯ ಮಟ್ಟ ಮೀರಿ ಮುತ್ಸದ್ದಿಯಾಗಿ ಮೆರುಗಬಲ್ಲ ದಾರ್ಷ್ಟ್ಯ, ಧೀಮಂತಿಕೆ, ದೂರ ದೃಷ್ಟಿ. ಹೀಗಾಗಿ 'ಆಡಳಿತ' ಕಾಂಗ್ರೆಸ್ ಎಂಬ ಅಭಿದಾನ ಪಡೆದ ಪ್ರತಿ ಕಾಂಗ್ರೆಸ್‌ನ ರಾಜ್ಯ ಘಟಕದ ಸಂಚಾಲಕರಾದರು. ಇಂದಿರಾ ಗಾಂಧಿಯವರ ನೇತೃತ್ವಕ್ಕೆ ಬೆಂಬಲವಿತ್ತ ಕಾಂಗ್ರೆಸ್ಸಿಗರ ಸಮಾವೇಶದಲ್ಲಿ ಪಾಲ್ಗೊಂಡರು. ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಸಂಘಟಿಸುವ ಹೊಣೆ ಹೊತ್ತರು. ಆದರೆ ರಾಜ್ಯದ ಸ್ಥಿತಿಗತಿಗಳ ಒನ್ನೆಲೆಯಲ್ಲಿ ಅವರು ಆಗ ಏಕಾಂಗಿ. ಒಂದು ರೀತಿಯಲ್ಲಿ ಮೂದಲಿಕೆಗೆ, ಅಪಹಾಸ್ಯಕ್ಕೆ ಕಾರಣರಾದ ವ್ಯಕ್ತಿ.. ಅವರ ಬಳಿ ಸುಳಿಯಲೂ ಜನರು ಅಂಜುತ್ತಿದ್ದ ಕಾಲ. ಪ್ರತಿ ಕಾಂಗ್ರೆಸ್ಸಿಗೆ ಜನಬಲ, ಧನ ಬಲಗಳಿರಲಿ, ಒಂದು ಕಛೇರಿಯೂ ಇರಲಿಲ್ಲ. ಹಂಗಾಮಿಯಾಗಿ ಅವರ ನಿವಾಸವೇ ಕಛೇರಿಯೂ ಆಗಿತ್ತು. ರಾಷ್ಟ್ರಪತಿ ಚುನಾವಣೆಯಲ್ಲಿ ಇಂದಿರಾಗಾಂಧಿ ಜಯ ಗಳಿಸುವವರೆಗೆ ಜನಬಲ ಒದಗಲೇ ಇಲ್ಲ. ಅನಂತರ ಪ್ರಜಾಸೋಷಲಿಸ್ಟ್ ಪಕ್ಷ, ಸ್ವತಂತ್ರ ಪಕ್ಷ, ಆಗಿದ್ದ ರಾಜ್ಯಮಟ್ಟದ ಜನತಾ ಪಕ್ಷಗಳೆಲ್ಲ ಆಡಳಿತ ಕಾಂಗ್ರೆಸ್ಸಿನ ಅಡಿಯಲ್ಲಿ ಒಂದುಗೂಡಿದಾಗ ಆಡಳಿತ ಕಾಂಗ್ರೆಸ್ ಗರಿ ಕೆದರಿ ಕೊಂಡಂತಾಯಿತು.

ರಾಷ್ಟ್ರರಂಗದಲ್ಲಿ ಹಲವು ಏರುಪೇರುಗಳುಂಟಾದ ಮಿಂಚಿನ ವೇಗದ ಮಾರ್ಪಾಟುಗಳು ನಡೆದ ದಿನಗಳವು. 1972ರಲ್ಲಿ ಮಹಾ ಚುನಾವಣೆ ನಡೆಯಬೇಕಿತ್ತು. ಇದನ್ನು ಒಂದು ವರ್ಷ ಹಿಂದೂಡಿದ ಇಂದಿರಾಗಾಂಧಿ 1971ರಲ್ಲೇ ಲೋಕಸಭಾ ಚುನಾವಣೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಏರ್ಪಾಟು ಮಾಡಿದರು. ರಾಜ್ಯದಲ್ಲಿ ವೀರೇಂದ್ರ ಪಾಟೀಲರ ಸರ್ಕಾರವಿತ್ತು. ಆಗಿನ ಕಾಂಗ್ರೆಸ್ ಎಂದರೆ ಪ್ರಬಲ ಕೋಮುಗಳ ಪಾಳೆಯಪಟ್ಟು. ಅಭ್ಯರ್ಥಿಗಳ ಆಯ್ಕೆಗೂ ಅದೇ ಆಧಾರ. ಆದರೆ ಆ ಜನರೆಲ್ಲ ಸಂಪ್ರದಾಯವಾದಿ (ಸಂಸ್ಥಾ) ಕಾಂಗ್ರೆಸ್ಸಿನ ತೆಕ್ಕೆಯಲ್ಲಿ. ಸುಲಭವಾಗಿ ಎಡವಲು ಸಾಧ್ಯವಿದ್ದ ಸನ್ನಿವೇಶದಲ್ಲಿ ದೇವರಾಜ ಅರಸರು ವಿವೇಕದ ದೃಷ್ಟಿ ತಳೆದರು.

ಹುಣಸೂರು ಕ್ಷೇತ್ರದಿಂದ ಆ ವೇಳೆಗಾಗಲೇ ನಾಲ್ಕು ಬಾರಿ ಜಯಗಳಿಸಿದ್ದರು ದೇವರಾಜ ಅರಸು. ಆ ಮತ ಕ್ಷೇತ್ರದಲ್ಲಿ ಅರಸರ ಕೋಮಿನ ಮತಗಳು ಒಂದೆರಡು ನೂರಕ್ಕಿಂತ ಹೆಚ್ಚಿರಲಿಲ್ಲ. ಆದರೂ ಅತ್ಯಲ್ಪ ಸಂಖ್ಯಾತ ಕೋಮಿನ ಈ ವ್ಯಕ್ತಿ, ಪ್ರಬಲ ಕೋಮಿನ ಹುರಿಯಾಳನ್ನು ಪರಾಭವಗೊಳಿಸಿ ಆಯ್ಕೆಯಾಗುತ್ತಲೇ ಬಂದಿದ್ದರು. ತನ್ನ ಕ್ಷೇತ್ರದಲ್ಲಿ ತಮಗೊಬ್ಬರಿಗೆ ಮಾತ್ರ ಇದು ಸಾಧ್ಯ ಎಂದುಕೊಳ್ಳದೆ ಇಡೀ ರಾಜ್ಯಕ್ಕೆ ತಮ್ಮ ಕ್ಷೇತ್ರದ ಸೂತ್ರವನ್ನೇ ಪ್ರಯೋಗಿಸಿದರು. ಪ್ರಬಲ ಕೋಮುಗಳು ಕ್ಷೇತ್ರದಲ್ಲಿ ಅಧಿಕವೆಂದರೆ ಶೇಕಡ 40ರಷ್ಟು ಜಾತಿಯ ಮತಗಳ ಬೆಂಬಲ ಪಡೆದಿರಬಹುದು. ಇದಕ್ಕೆ ಪ್ರತಿಯಾಗಿ ಅಲ್ಪ ಸಂಖ್ಯಾತರ ಮತಗಳನ್ನು ಒಟ್ಟುಗೂಡಿಸಿದರೆ ಗೆಲುವೇನೂ ಗಗನಕುಸುಮವಾಗಬೇಕಿಲ್ಲವೆಂಬುದು ಅವರಿಗೆ ಸಿದ್ಧಿಸಿತ್ತು. ಅಭ್ಯರ್ಥಿಗಳ ಆಯ್ಕೆಯಲ್ಲಿ ಅವರು ಈ ಎಚ್ಚರ ವಹಿಸಿದರು. ರಾಜ್ಯದ 27 ಲೋಕಸಭಾ ಕ್ಷೇತ್ರಗಳಲ್ಲಿ ಜಯಗಳಿಸಿದ ಪೈಕಿ ಹಲವರು ಕಣಕ್ಕೇ ಹೊಸಬರು. ಅದೂ ಭಾರಿ ಬಹುಮತದ ಗೆಲುವು. ಮತೀಯ ಅಲ್ಪ ಸಂಖ್ಯಾತರಲ್ಲಿ ದೀರ್ಘಕಾಲದಿಂದ ಹೆಪ್ಪುಗಟ್ಟಿದ್ದ ಅಸಮಾಧಾನ ಬೆಂಬಲದ ರೂಪದಲ್ಲಿ ಉಕ್ಕಿ ಹರಿಯಿತು. ಜತೆಗೆ ಅಡಳಿತ ಕಾಂಗ್ರೆಸ್ಸಿನ ಪ್ರಗತಿಪರ ಧೋರಣೆ, ಕಾರ್ಯಕ್ರಮಗಳು ಆಕರ್ಷಣೆಯ ಅಂಶವನಿಸಿದ್ದವು. ಭಾರಿ ಗೆಲುವಿನ ಶ್ರೇಯಸ್ಸು ದೇವರಾಜರ

Sri Vidyabharathi Book Centre, Sringeri

CC-0. Mumukshu Bhawan Varanasi Collection. Public Domain. Digitized by eGangotri

ದಾಯಿತು. ನಿರೀಕ್ಷೆಗೂ ಮೀರಿದ ಫಲಿತಾಂಶ ಪಡೆದ ಅರಸು ಪುಲಕಿತರಾದರು. ತಮ್ಮದು ಭದ್ರಕೋಟೆ ಎಂದು ಭ್ರಮಿಸಿದ್ದ ವರು ತಲ್ಲಣಿಸಿದರು.

ಅರಸರ ದೂರದೃಷ್ಟಿ ಸ್ವಲ್ಪ ಮುಂಕುಗಟ್ಟಿದ್ದು ಈ ಸನ್ನಿವೇಶದಲ್ಲಿ. ಇದಕ್ಕೆ ಅವರ ಒಂದು ದೌರ್ಬಲ್ಯವೂ ಕಾರಣ. ಅವರು 'ಕೆಳೆಗೆ ಕೆಳೆ; ಪಗೆಗೆ ಪಗೆ' ರಾಜ್ಯದ ರಾಜಕೀಯದಲ್ಲಿ ತಲೆ ಎತ್ತಲಾಗದೆ ಇದ್ದ ತಮಗೆ, ಆಸರೆ ನೀಡಿದವರು ಇಂದಿರಾಗಾಂಧಿ ಎಂಬುದು ಅವರ ಮನಸ್ಸಿನ ಆಳಕ್ಕೆ ಇಳಿದಿತ್ತು. ಸ್ಥಾಪಿತ ನಾಯಕತ್ವದ ವಿರುದ್ಧ ನಿಲ್ಲಲು, ಸಂಪ್ರದಾಯವಾದಿ ನಾಯಕ ಗಣವನ್ನು ಎದುರಿಸಲು ಇಂದಿರಾಗಾಂಧಿಯವರಿಗೂ ರಾಜ್ಯಗಳಲ್ಲಿ ದೇವರಾಜ ರಂತಹ ಎದೆಗಾರ ಬೇಕಿತ್ತು ಎಂಬುದು ವಾಸ್ತವ ಸಂಗತಿ. ಇಲ್ಲವಾಗಿದ್ದರೆ ಅವರು ಮಣ್ಣಿನ ದೋಣಿ ಏರಿದ ಅನುಭವಕ್ಕೆ ಒಳಗಾಗಬೇಕಿತ್ತು. ಅದು ಬೇರೆ ವಿಚಾರ. ಆದರೆ ದೇವರಾಜ ಅರಸು ಮಾತ್ರ ಲೋಕಸಭಾ ಚುನಾವಣೆಯ ಗೆಲುವಿನ ಕೀರ್ತಿಯನ್ನೆಲ್ಲ ಇಂದಿರಾಗಾಂಧಿಯವರ ವರ್ಚಸ್ಸಿಗೆ ಸಮರ್ಪಿಸಿದರು. ಮುಂದೆಯೂ ತಮ್ಮೆಲ್ಲ ಕೀರ್ತಿ ಅಭ್ಯುದಯವನ್ನು ಅಲ್ಲಿಗೇ ನಿವೇದಿಸಿಬಿಟ್ಟರು. ಅಂತಹ ಅಚಲ ನಾಯಕನಿಷ್ಠೆ. ಕರ್ನಾಟಕದಲ್ಲಿ 1971ರ ವರೆಗೆ ಮೇಲುಗೈ ಪಡೆದದ್ದು ಬಲಾಢ್ಯ ಕೋಮಿನ ರಾಜಕೀಯ ಪಾಳೆಯಗಾರಿಕೆ. ಅದನ್ನು ಮುರಿಯದೆ ಇತರರು ರಾಜಕೀಯ ಅಧಿಕಾರವನ್ನು ಕನಸಿನಲ್ಲೂ ಪಡೆಯುವುದು ಅಸಾಧ್ಯ ವೆಂಬುದನ್ನು ಸ್ವಕ್ಷೇತ್ರದಲ್ಲಿ ಯಶಸ್ವಿಯಾಗಿ ಪ್ರಯೋಗಿಸಿ ಅದನ್ನೇ ರಾಜ್ಯರಂಗಕ್ಕೆ ವಿಸ್ತರಿಸಿದವರು ಅರಸು.

## ತತ್ತ್ವನಿಷ್ಠೆ

ಲೋಕಸಭಾ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಗೆಲವು ಪಡೆದ ಮೇಲೆ ರಾಜ್ಯದ ರಾಜಕಾರಣದಲ್ಲಿ ಅಲ್ಲೋಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲ್ಲೋಲವುಂಟಾಯಿತು. ವೀರೇಂದ್ರ ಪಾಟೀಲರ ಸರ್ಕಾರದ ಬಹುಮತ ಇರುಳು ಉರುಳಿ ಹಗಲು ಹುಟ್ಟುವುದರೊಳಗೆ ಕರಗಿತ್ತು. ಅವರ ರಾಜೀನಾಮೆ ಅನಿವಾರ್ಯವೆನಿಸಿತು. ಸಂಸ್ಥಾ ಕಾಂಗ್ರೆಸ್ಸಿನ ಶಾಸಕರೆಲ್ಲ ಆಡಳಿತ ಕಾಂಗ್ರೆಸ್ ಕಛೇರಿಯಲ್ಲಿ ಸಾಲು ಗಟ್ಟಿ ನಿಂತರು. ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ಸಿನ ಸಂಘಟನೆಯ ಜತೆಗೆ ಆಗಲೇ ದೇವರಾಜ ಅರಸರಿಗೆ ಹೊಸ ಹೊಣೆಯೂ ಹೆಗಲಿಗೇರಿತ್ತು. ರಾಷ್ಟ್ರೀಯ ರೇಷ್ಮೆ ಮಂಡಲಿಯ ಅಧ್ಯಕ್ಷ ಸ್ಥಾನಕ್ಕೆ ಅವರನ್ನು ಕೇಂದ್ರ ಸರ್ಕಾರ ನೇಮಿಸಿತ್ತು. ರೇಷ್ಮೆ ಮಂತ್ರಿಯಾಗಿ ಅನುಭವ ಪಡೆದಿದ್ದು, ಬೇಸಾಯಗಾರರ ಬಂಧುವಾದ ದೇವರಾಜರಿಗೆ ಇದೊಂದು ಅವಕಾಶ ವಿಶೇಷವೆನಿಸಿತ್ತು. ಅವರ ವ್ಯಾಪಕ ಸಂಚಾರವೂ ನಡೆದಿತ್ತು.

## ಮುಖ್ಯಮಂತ್ರಿ

1972ರ ಚುನಾವಣೆ ಬಂತು. ರಾಜಕೀಯ ಅಧಿಕಾರಕ್ಕೆ ದೂರವೇ ಉಳಿದ ಹಲವು ಹತ್ತು ಕೋಮುಗಳಿಗೆ ರಾಜಕೀಯ ಅಧಿಕಾರ ಕೊಡಬೇಕು ; ಅವರ ಹೊಣೆ ಹಕ್ಕುಗಳನ್ನು ತಿಳಿಸಿ ಜಾಗೃತಿ ಮೂಡಿಸಬೇಕು ; ರಾಜಕೀಯ ಗುತ್ತಿಗೆಯನ್ನು ಕಿತ್ತೊಗೆಯಬೇಕೆಂಬ ಬಹುಕಾಲದ ಬಯಕೆಗೆ ಆಕಾರ ಕೊಡುವ ಅವಕಾಶ ದೊರಕಿತು. ಅಭ್ಯರ್ಥಿಗಳ ಆಯ್ಕೆಯೇ ಈ ಆಧಾರದ ಮೇಲೆ ದೊರಕಿತು. ಅರಸರ ಪ್ರಯೋಗ ಫಲಿಸಿತು. ನಿರೀಕ್ಷೆಗೆ ಮೀರಿದ ಬಹುಮತ ದೊರಕಿತು.

ಈ ಹಂತದಲ್ಲೂ ದೇವರಾಜರು ಇನ್ನೊಂದು ನೈತಿಕ ಗೆಲುವು ಸಾಧಿಸಿದರು. ಪಕ್ಷಾಂತರ ಹೊಂದಿದವರನ್ನು ಕಟ್ಟಿಕೊಂಡು ಸರ್ಕಾರ ರಚಿಸಲು ಸಿದ್ಧನಿಲ್ಲವೆಂದು ಪಟ್ಟುಹಿಡಿದ ಹಾಗೇ ಪಕ್ಷದ

Sri Vidyabharathi Book Centre, Sringeri

 CC-0. In Public Domain. Digitized by eGangotri 

ತಲೆಯಾಳು ಆಗಿರುವಾಗ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುವುದು ತರವಲ್ಲ ; ಪಕ್ಷದ ಒಟ್ಟು ಗೆಲುವಿಗಾಗಿ ದುಡಿಯಬೇಕೇ ಹೊರತು, ತಮ್ಮದೊಂದು ಕ್ಷೇತ್ರದಷ್ಟೆ ಗೆಲುವಿಗಾಗಿ ತೊಡಗುವುದಿಲ್ಲವೆಂದು ನಿರ್ಧರಿಸಿ ಚುನಾವಣೆಯ ಕಣದಿಂದ ದೂರ ಉಳಿದು ಪಕ್ಷದ ಗೆಲುವನ್ನು ಖಾತರಿಗೊಳಿಸಿದರು.

ರಾಜ್ಯ ವಿಧಾನಮಂಡಲದ ಇತಿಹಾಸದಲ್ಲೇ ಮೊದಲಬಾರಿಗೆ 'ಪ್ರಾತಿನಿಧಿಕ'ವೆನಿಸಿದ್ದ ಶಾಸನಸಭೆಯ ಆಡಳಿತ ಕಾಂಗ್ರೆಸ್ ಶಾಸಕ ದಳ ದೇವರಾಜರನ್ನು ನಾಯಕತ್ವ ವಹಿಸಲು ಕೋರಿತು. ಪಕ್ಷ ಗಳಿಸಿದ್ದ ಗೆಲುವಿನ ಶಿಲ್ಪಿಯಾದ ಅರಸು ಶಾಸನಸಭೆಯಲ್ಲಿ ಬಹುಮತ ಪಡೆದಿದ್ದ ಕಾಂಗ್ರೆಸ್ ದಳದ ನಾಯಕರಾಗಿ 1972ರ ಮಾರ್ಚ್ 20ರಂದು ಕರ್ನಾಟಕ ರಾಜ್ಯದ ಎಂಟನೆಯ ಮುಖ್ಯ ಮಂತ್ರಿಯಾದರು.

ಬಹುಸಂಖ್ಯಾತ ಕೋಮಿನ ಬಲಾಢ್ಯರಿಗೇ ಮೀಸಲಿದ್ದ ರಾಜಕೀಯ ಪ್ರಾಬಲ್ಯವನ್ನು ಮುರಿದು ಮತೀಯ ಅಲ್ಪ ಸಂಖ್ಯಾತರೂ ಕರ್ನಾಟಕದಲ್ಲಿ ಅಧಿಕಾರ ಪಡೆಯಬಲ್ಲರು – ಅದಕ್ಕಾಗಿ ಅಗಾಧ ತಾಳ್ಮೆ, ಅನುಭವ, ದೂರದೃಷ್ಟಿ ಮತ್ತು ಅಂತಃಸತ್ವ ವಿದ್ದರೆ-ಎಂಬುದನ್ನು ಸಾಬೀತುಗೊಳಿಸಿದ ಶ್ರೇಯಸ್ಸು ದೇವರಾಜರಿಗೆ ಲಭಿಸಿತು. ಕರ್ನಾಟಕದ ರಾಜಕೀಯದ ಇತಿಹಾಸದಲ್ಲಿ ಹೊಸ ಅಧ್ಯಾಯ ಒಂದನ್ನು ಆರಂಭಿಸಿದ ಅಗ್ಗಳಿಕೆ ಅವರದಾಯಿತು. ಈ ಅಧಿಕಾರವನ್ನು ಮುಂದಿನ ಏಳು ವರ್ಷಗಳ ಅವಧಿಯಲ್ಲಿ ತಮ್ಮ ಗಾದಿಯನ್ನು ಭದ್ರಪಡಿಸಿಕೊಳ್ಳಲು ಬಳಸಲಿಲ್ಲ. ಬಹು ಕಾಲದಿಂದ ಹೃದಯದಲ್ಲಿ ಕಾಪಾಡಿಕೊಂಡು ಬಂದಿದ್ದ ಸಾಮಾಜಿಕ ನ್ಯಾಯಸಾಧನೆಗೆ ಉಪಕರಣವನ್ನಾಗಿ ಮಾಡಿಕೊಂಡರು.

ಸಂಪುಟದಲ್ಲಿ ನಾನಾ ದುರ್ಬಲ ವರ್ಗಗಳನ್ನು ಸಂಘಟಿಸಿ ಅವರೆಲ್ಲರಿಗೆ ರಾಜಕೀಯ ಶಕ್ತಿಯನ್ನು ಗಳಿಸಿಕೊಳ್ಳುವ ದೀಕ್ಷೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಡಿದ್ದು ದೇವರಾಜ ಅರಸರ ಮಹತ್ಕಾರ್ಯಗಳಲ್ಲಿ ಒಂದು. ಈಗ ರಾಜ್ಯದ ದುರ್ಬಲ ಮತ್ತು ಅಲ್ಪಸಂಖ್ಯಾತ ಕೋಮಿನ ಜನರಲ್ಲಿ ಅಧಿಕಾರ ಪಡೆಯಬೇಕೆಂಬ ಹಂಬಲ ಬೆಳೆದಿದ್ದರೆ, ಅದಕ್ಕೆ ಭೂಮಿಕೆಯಾಗಿ ಆ ವರ್ಗಗಳಲ್ಲಿ ಮೂಡಿರುವ ರಾಜಕೀಯ ಜಾಗೃತಿ. ಈ ಜಾಗೃತಿಯನ್ನುಂಟುಮಾಡಿದವರು ದೇವರಾಜ ಅರಸು. ಇಷ್ಟನ್ನು ಅವರ ಪ್ರಬಲ ವಿರೋಧಿಗಳೂ ಒಪ್ಪಿದ್ದಾರೆ.

## ನಾಮಕರಣ

ದೇವರಾಜರು ತಮ್ಮ ಹೆಸರು ನಾಡಿನ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಹ ಇನ್ನೊಂದು ಮಹತ್ಕಾರ್ಯ ನಡೆಸಿದರು. 1956ರ ನವಂಬರ್ ಒಂದೆರಂದು ಕನ್ನಡ ಭೂಭಾಗಗಳೆಲ್ಲ ಒಂದುಗೂಡಿ ಹೊಸರಾಜ್ಯ ರಚನೆ ಆಯಿತು. ಆದರೂ ಹೊಸ ರಾಜ್ಯಕ್ಕೆ ಅದರ ಗಾತ್ರ – ಗಾಂಭೀರ್ಯ – ಗರಿಮೆಗಳಿಗೆ ಅನುಗುಣವಾದ ನಾಮಕರಣ ಆಗಿರಲಿಲ್ಲ. ದೇವರಾಜ ಅರಸು ಕರ್ನಾಟಕದ ಏಕೀಕರಣಕ್ಕೆ ಹೋರಾಡಿದವರಲ್ಲ. ಒಂದು ವಿಶಿಷ್ಟ ನಂಬಿಕೆ – ನಡವಳಿಕೆ, ಆಚರಣೆಗಳ ಹಿನ್ನೆಲೆಯಲ್ಲಿ ಆ ಕಾಲಕ್ಕೇ 'ಮಾದರಿ' ರಾಜ್ಯವೆನಿಸಿದ್ದ 'ಮೈಸೂರು'ತನವನ್ನು ಮೈಗೂಡಿಸಿಕೊಂಡು ಬೆಳೆದವರು. ರಾಜ್ಯಕ್ಕೆ 'ಕರ್ನಾಟಕ'ವೆಂದು ಹೆಸರಿಡುವ ಪ್ರಯತ್ನ ನಡೆದಾಗ ಅದನ್ನು ಖಂಡತುಂಡವಾಗಿ ವಿರೋಧಿಸಿದ್ದರು. 1970ರಲ್ಲಿ ಕಾಂಗ್ರೆಸ್ಸಿನ (ಆಗ ಆಡಳಿತ ಕಾಂಗ್ರೆಸ್ಸು) ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡು ಸತತವಾಗಿ 71 ಮತ್ತು 72ರಲ್ಲಿ ಎರಡು ಚುನಾವಣೆಗಳನ್ನು ಎದುರಿಸಿ ಅಗಾಧ ಜನ ಸಂಪರ್ಕ ಸಾಧಿಸಿದಾಗ – ರಾಜ್ಯದ ಬಹುಭಾಗದ ಜನರ ಅಪೇಕ್ಷೆ ಅವರಿಗೆ ವೇದ್ಯವಾಯಿತು. ಹಳೆಯ ಮೈಸೂರು ರಾಜ್ಯದಲ್ಲೂ 'ಕರ್ನಾಟಕ'ದ ಬಗ್ಗೆ ಒಲವಿದೆ; ವಿಲೀನಗೊಂಡ ಭೂಭಾಗಗಳಲ್ಲಿ ಈ ಬಯಕೆ ಉತ್ಕಟವಾಗಿದೆ ಎಂಬುದನ್ನು ಅರಿತ ಅರಸು ಅಧಿಕಾರಕ್ಕೇ

Sri Vidyabharathi Book Centre, Sringeri

CC-O. In Public Domain. Digitized by eGangotri



ಏಕಾಗ್ರ ಚಿತ್ತತೆ

Sri Vidyabharathi Book Centre, Sringeri

CC-O. In Public Domain. Digitized by eGangotri



ರಿದ ಮರು ವರ್ಷವೇ (1973) ರಾಜ್ಯದ ಹುಟ್ಟು ಹಬ್ಬದ ದಿನ ನಾಮಕರಣವನ್ನೂ ನೆರವೇರಿಸಿದರು. ಹುಟ್ಟಿದ 17 ವರ್ಷಗಳ ನಂತರ ನಾಡು 'ಕರ್ನಾಟಕ'ವಾಯಿತು.

## ಸಾಮಾಜಿಕ ಮಾಪರ್ಾಟು

ಅರಸರ ಹಲವು ಹತ್ತು ಜನಪರವಾದ ಕಾರ್ಯಗಳಲ್ಲಿ ಪ್ರಮುಖವಾದುದು ಭೂಸುಧಾರಣೆ ಶಾಸನದ ಜಾರಿ. ಐವತ್ತರ ದಶಕದಲ್ಲೇ ಈ ಪ್ರಯತ್ನ ಆರಂಭವಾಗಿದ್ದರೂ ಗೇಣಿದಾರರಿಗೆ ರಕ್ಷಣೆ ನೀಡುವಷ್ಟು ಕೆಲಸ ಕೂಡ 1972ರವರೆಗೆ ಸಾಧ್ಯವಾಗಿರಲಿಲ್ಲ.

1972ರಲ್ಲಿ ಆಡಳಿತ ಕಾಂಗ್ರೆಸ್ ಚುನಾವಣೆಗೆ ಮೊದಲೇ ಭೂ ಸುಧಾರಣೆ ಜಾರಿ ಕ್ರಮವನ್ನು ಜನತೆಗೆ ವಾಗ್ದಾನ ನೀಡಿತ್ತು. ಆದರೂ ಇದನ್ನೇನೂ ಜನತೆ ಗಾಢವಾಗಿ ನಂಬಿರಲಿಲ್ಲ. 'ಚುನಾವಣೆ ಕಾಲದ ಭರವಸೆ' ಎಂಬ ತಾತ್ಸಾರ ವ್ಯಾಪಕವಾಗಿತ್ತು. ಅಧಿಕಾರಕ್ಕೆ ಬಂದ ಮರುವರ್ಷವೇ ಶಾಸನದ ಕರಡು ಸಿದ್ಧವಾಯಿತು. ಶಾಸನಕ್ಕೆ ವಿಧಾನಮಂಡಲದಲ್ಲಿ ವಿರೋಧ ಬರದಂತೆ ಅದರ ಪರವಾಗಿ ದೇವರಾಜರು ರಾಜ್ಯದ ಉದ್ದಗಲ ಜನಾಭಿಪ್ರಾಯವನ್ನು ದಟ್ಟವಾಗಿ ಮೂಡಿಸಿದ್ದರು. ಈ ಹಿನ್ನೆಲೆಯಲ್ಲಿ ವಿಧಾನಮಂಡಲದ ಮುಂದೆ ಬಂದ ಶಾಸನದ ಪರಿಶೀಲನೆಗೆ ವಿರೋಧ ವ್ಯಕ್ತವಾಗಲಿಲ್ಲ.

ಒಂದು ಭೂಮಿಯ ಬೇಸಾಯಗಾರ ಯಾರು, ಒಡೆತನ ಯಾರಲ್ಲಿದೆ ಇದನ್ನು ಕಾನೂನಿನ ಕಲಮುಗಳ ಆಧಾರದ ಮೇಲೆ ನ್ಯಾಯಾಲಯ ನಿರ್ಧರಿಸಿ ತೀರ್ಪು ಕೊಡುವುದಕ್ಕಿಂತ, ಸ್ಥಳೀಯರು ಅದನ್ನು ಸ್ಪಷ್ಟವಾಗಿ ಹೇಳಬಲ್ಲರು. ಆರ್ಥ ಜನರಿಂದಲೇ ಕೂಡಿದ

Sri Vidyabharathi Book Centre, Sringeri

CC-O. In Public Domain. Digitized by eGangotri



ನ್ಯಾಯಾಲಯ ರಚಿಸಿದರೆ ಸ್ಥಳೀಯವಾಗಿಯೇ ವಿವಾದ ಇತ್ಯರ್ಥ ಗೊಳ್ಳಲು ಸಾಧ್ಯ. ಬೆಳೆಯುತ್ತಿರುವವನು ಯಾರು, ಯಾರು ಕೈ ಚೆಲ್ಲಿ ಕೂತಿದ್ದು ಅದರ ಅನುಕೂಲ ಪಡೆಯುತ್ತಿದ್ದಾರೆಂಬುದನ್ನು ನಿರ್ಧರಿಸಲು ಕಾನೂನಿನ ಪಾಂಡಿತ್ಯ ಏಕೆ ಬೇಕು ? ಕೈ ಹುಣ್ಣು ಕಾಣಲು ಕನ್ನಡಿ ಬೇಕಾಗುತ್ತದೇನು ? ಆದ್ದರಿಂದ 'ಜನತಾ ನ್ಯಾಯಾಲಯ'ಗಳು ಗೇಣಿ ಹಕ್ಕನ್ನು ನಿರ್ಧರಿಸಬೇಕು. ಈ ನ್ಯಾಯಾಲಯಗಳ ಕಾರ್ಯಕ್ಕೆ ಅನಗತ್ಯ ತೊಡಕು ಉಂಟಾಗದೆ ಇರಬೇಕಾದರೆ ಇಲ್ಲಿ ವಕೀಲರಿಗೆ ಎಡೆ ಇರಕೂಡದು. ಶಾಸಕರು ಜನತೆಯ ಪ್ರತಿನಿಧಿ – ಅವರು ಇರಲಿ. ಹೊಲ ಗದ್ದೆಗಳಲ್ಲಿ ಗಂಡಸಿನ ಜತೆಗೂಡಿ ಬೆವರು ಹರಿಸುವ ಮಹಿಳೆಯ ಪ್ರತಿನಿಧಿ ಯೊಬ್ಬರು ಅಲ್ಲಿರಬೇಕು. ಜೀತದಾಳುಗಳಂತೆ ದುಡಿಮೆಯಲ್ಲೇ ದಿನದೂಡುವ ಹರಿಜನ ಗಿರಿಜನ ವರ್ಗದ ಮತ್ತೊಬ್ಬ ಪ್ರತಿನಿಧಿ ಇದ್ದರೆ ಸಾಕು. ಈ ಮೂರೂ ಜನರು ದುಷ್ಪರಾಗಿ ವಂಚನೆಗೆ ಇಳಿಯದಿದ್ದರೆ ಹೆಚ್ಚು ಸಮೀಪದಲ್ಲಿ ಸತ್ಯವನ್ನು ಕಾಣಲು ಸಾಧ್ಯ ವೆಂಬುದನ್ನು ನಿರ್ಧರಿಸಿದರು ದೇವರಾಜ ಅರಸು. ರಾಜ್ಯದ ಎಲ್ಲ ಭಾಗಗಳಲ್ಲಿ ಜನತಾ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದವು. ಈ 'ನ್ಯಾಯಾಲಯ'ಗಳ ತೀರ್ಪಿಗೆ ಅಧಿಕಾರ ಮುದ್ರೆ ಬೀಳುವಂತಾ ಗಲು ಸರ್ಕಾರಿ ಅಧಿಕಾರಿಯನ್ನು ತೀರ್ಪು ಬರೆಯುವ ಅಧ್ಯಕ್ಷ ನನ್ನಾಗಿ ನೇಮಿಸಲಾಯಿತು. 1974ರ ಏಪ್ರಿಲ್ ಒಂದರಿಂದ ಈ ಐತಿಹಾಸಿಕ ಕಾರ್ಯ ಆರಂಭವಾಯಿತು. ಈ ಆಂದೋಳನ ವನ್ನು ಸಂಪೂರ್ಣವಾಗಿ ಕಲ್ಪಿಸಿಕೊಂಡು ಅದಕ್ಕೆ ಮೊದಲು ಸ್ಥೂಲ ವಾದ ಅನಂತರ ಸೂಕ್ಷ್ಮವಾದ ಆಕಾರ ನೀಡಿ ಚಾಲನೆ ಕೊಟ್ಟ ಶ್ರೇಯಸ್ಸು ಇತಿಹಾಸದ ಪುಟಗಳಲ್ಲಿ ಸೇರಬೇಕಾದ ಅರ್ಹ ಸಂಗತಿ.

ಟ್ರಿಬ್ಯೂನಲ್‌ಗಳಲ್ಲಿ ಸದಸ್ಯರಾಗಿ ತೀರ್ಪು ಬರೆಯಬೇಕಾದ ಸದಸ್ಯರಿಗೆ "ನ್ಯಾಯಾಧೀಶ ಅಗೋದು ಪೂರ್ವಜನ್ಮದ ಪುಣ್ಯ.

Sri Vidyabharathi Foundation Trust, Bangalore

CC-O. In Public Domain. Digitized by eGangotri



ನಿಮಗೆ ಹೈಕೋರ್ಟು ನ್ಯಾಯಾಧೀಶರಾಗುವುದಕ್ಕಿಂತ ಹೆಚ್ಚಿನ ಸ್ಥಾನ ಸಿಕ್ಕಿದೆ. ಯುಗಯುಗಗಳಿಂದ ಬಡ ಜನರಿಗೆ ಆಗಿರುವ ಅನ್ಯಾಯವನ್ನು ನಿವಾರಿಸುವ ಅವಕಾಶಕ್ಕಿಂತ ಬೇರೇನು ಬೇಕು" ಎಂದು ಹುರಿದುಂಬಿಸಿದರು.

"ತಂಟೆ ತಕರಾರು ಬಂದರೆ ಆ ಊರಿಗೇ ಹೋಗಿ ಟಾಮ್ ಟಾಮ್ ಹೊಡೆಸಿ ಜನರನ್ನು ಕರೆಸಿ. ಜಮೀನು ಯಾರು ಮಾಡ್ತಾ ಇದ್ದಾರೆ ಜನರನ್ನು ಕೇಳಿ ತಿಳಿದುಕೊಳ್ಳಿ. ಮಾಲಿಕನೂ ಇರುತ್ತಾನೆ. ಜನರೂ ಇರುತ್ತಾರೆ. ಶೇಕಡ 99ರಷ್ಟು ಸತ್ಯ ಬೆಳಕಿಗೆ ಬರುತ್ತೆ" ಎಂದು ಕಾರ್ಯ ವಿಧಾನವನ್ನೂ ಹೇಳಿಕೊಟ್ಟು ಹೊತ್ತಿರುವ ಹೊಣೆಯನ್ನು ನಿರ್ವಂಚನೆಯಿಂದ ಮಾಡಲು, ಕಂದಾಚಾರದ ರೀತಿ ನೀತಿಗಳನ್ನು ಬಿಡಲು ಸೂಚನೆ ನೀಡಿದರು. ಹೀಗೆ ರಾಷ್ಟ್ರಕ್ಕೇ ಮೇಲ್ಪಂಕ್ತಿಯಾಗುವ ಹಾಗೆ, ನ್ಯಾಯಾಲಯದ ವಿಳಂಬವಿಲ್ಲದೆ, ಹಣ ವೆಚ್ಚ ಮಾಡಬೇಕಾದ ಸ್ಥಿತಿ ಇಲ್ಲದಂತೆ ಭೂಸುಧಾರಣೆಯನ್ನು ಆಚರಣೆಗೆ ತಂದರು.

## ಜನಹಿತ ಸಾಧನೆ

ನೆತ್ತಿಯ ಮೇಲೊಂದು ಸೂರೂ ಇಲ್ಲದ ನಿರ್ಗತಿಕರಿಗೆ 'ಜನತಾ ಮನೆ'ಗಳನ್ನು ಸರ್ಕಾರದ ಸಹಾಯದಿಂದ ನಿರ್ಮಿಸುವ ಯೋಜನೆ ಜಾರಿಗೆ ತಂದು, ಜೀವಮಾನದಲ್ಲಿ ಸ್ವಂತದ ಮನೆ ಪಡೆಯುವ ಕನಸನ್ನೂ ಕಾಣದ ಜನರಿಗೆ ವಾಸಕ್ಕೆ ಬೀಡು ಒದಗಿಸುವ ಸಾಹಸ ಕೈಗೊಂಡರು. ಮನೆ ಕಟ್ಟಿಕೊಂಡೇವು–ಆದರೆ ನಮ್ಮದೇ ಆದ ನೆಲವಿಲ್ಲ ಎಂದು ಹಲಬುತ್ತಿದ್ದವರಿಗೆ ಲಕ್ಷಗಟ್ಟಲೆ ಉಚಿತ ನಿವೇಶನಗಳನ್ನು ಒದಗಿಸಿದರು.

CC-O. Vasishtha Tripathi Collection. Digitized by eGangotri

ರಾಷ್ಟ್ರಕ್ಕೆ 1975ರಲ್ಲಿ ಪರೀಕ್ಷೆ ಸಂಕಟ ಬಂದು ಬಂದಿತು.

CC-O. In Public Domain. Digitized by eGangotri

'ಆಪತ್ಕಾಲೀನ ಸ್ಥಿತಿ'ಯನ್ನು ಘೋಷಿಸಲಾಗಿತ್ತು. ಆ ಸಂದರ್ಭ ಬಳಸಿಕೊಂಡು ಬಡವರ–ದೀನ–ದಲಿತರ ಉದ್ಧಾರಕ್ಕೆಂದು 20 ಅಂಶಗಳ ಕಾರ್ಯಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ಸೂಚಿಸಿತ್ತು. ಆದರೆ ದೇವರಾಜ ಅರಸರ ದೂರದೃಷ್ಟಿಯ ಫಲ —20 ಅಂಶಗಳ ಕಾರ್ಯಕ್ರಮದ ಘೋಷಣೆಗೆ ಎಷ್ಟೋ ಮೊದಲು ಅದರ ಅನೇಕ ಕಾರ್ಯಕ್ರಮಗಳು ಕರ್ನಾಟಕದಲ್ಲಿ ಜಾರಿಯಲ್ಲಿ ಬಂದಿದ್ದವು. ಇನ್ನು ಉಳಿದವನ್ನು ಜಾರಿಗೆ ತರುವುದು ದುಸ್ತರವೆನಿಸಲೇ ಇಲ್ಲ.

ಮತೀಯ ಅಲ್ಪಸಂಖ್ಯಾತರನ್ನು ಸಂಘಟಿಸಿದ ಮತ್ತು ಆ ವರ್ಗಗಳಿಗೆ ರಾಜಕೀಯ ಅಧಿಕಾರದ ಅರಿವುಂಟುಮಾಡಿಕೊಟ್ಟ ದೇವರಾಜರು ಪ್ರಯತ್ನವನ್ನು ಅಪೂರ್ಣವಾಗಿ ಬಿಡಲಿಲ್ಲ. ರಾಜಕೀಯ ಅರಿವಿಗೆ ತಿಳಿವು ಮುಖ್ಯ ಆದ್ದರಿಂದ ಶಿಕ್ಷಣ ರಂಗದಲ್ಲಿ ವಿಶೇಷ ಸೌಲತ್ತು ಕೊಡಬೇಕು. ತುಂಡು ತುಂಡಾಗಿ ಮೂಕವೂ ಆಗಿರುವ ಈ ವರ್ಗಗಳಿಗೆ ಉದ್ಯೋಗ ರಂಗದಲ್ಲೂ ಅರ್ಹ ಪ್ರಾತಿನಿಧ್ಯ ಸಿಗಬೇಕು. ಈ ಕಾರ್ಯ ಶಾಸ್ತ್ರೀಯವಾಗಿ ನಡೆಯಬೇಕೆಂದು ಆಲೋಚಿಸಿ ಲಕ್ಷ್ಮಣ ಹಾವನೂರರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದರು. ನಾನಾ ಮತ ಕೋಮು, ಬುಡಕಟ್ಟುಗಳ ಸಾಮಾಜಿಕ–ಆರ್ಥಿಕ ಸ್ಥಿತಿಗಳನ್ನು ಆಳವಾಗಿ ಪರಿಶೀಲಿಸಿದ ಆಯೋಗ ಸಲ್ಲಿಸಿದ ವರದಿಯ ಆಧಾರದ ಮೇಲೆ ಹಿಂದುಳಿದ ವರ್ಗಗಳಿಗೆ ನೌಕರಿ ಮತ್ತು ಶಿಕ್ಷಣದಲ್ಲಿ ಮೀಸಲು ಸೌಲಭ್ಯ ಕಲ್ಪಿಸುವ ಕಾರ್ಯವನ್ನು ನಿರ್ಭೀತಿಯಿಂದ ಮಾಡಿದರು. ಇದೇ ಕಾರ್ಯವನ್ನು ಇನ್ನೂ ಸಣ್ಣ ಸಣ್ಣ ಪ್ರಮಾಣದಲ್ಲಿ ಮಾಡಿದ ಬಿಹಾರದಲ್ಲಿ ಒಂದು ಸರ್ಕಾರವೇ ಈ ಪ್ರಯತ್ನದಲ್ಲಿ ಪತನ ಹೊಂದಿತು. ಆದರೂ ಧೈರ್ಯವಾದಿ ದೇವರಾಜರು ಅಂಜಲಿಲ್ಲ. ಎಲ್ಲೂ ಪ್ರಾತಿನಿಧ್ಯ ಪಡೆಯದಿದ್ದ ವಿಶಾಲ ಜನ ಸಮುದಾಯದ ಎಲ್ಲೆಗೆ ಕಾರಣ

Sri Vidyabharathi Book Centre, Sringeri

CC-O. In Public Domain. Digitized by eGangotri



ಪಶ್ಚಿಮಾಭಿಮುಖ—ವಿಜಯಿ ಮಾನಸ್ತಂಭಗಳು ಕಾಣುವ

Sri Vidyabharathi Book Centre, Sringeri

CC-O. In Public Domain. Digitized by eGangotri



ಶೇಷಶಯನದಲ್ಲಿ ಶ್ರೀಮನ್ನಾರಾಯಣ

Sri Vidyabharathi Book Centre, Sringeri

CC-O. In Public Domain. Digitized by eGangotri



ರಾದರು. ಈ ಪ್ರಯತ್ನದಲ್ಲಿ ಎದುರಾದ ಅಡ್ಡಿಗಳನ್ನು ಅವರು ಎಣಿಸಲೇ ಇಲ್ಲ.

ಹರಿಜನ ಗಿರಿಜನರಿಗೆ ಶಿಕ್ಷಣದಲ್ಲಿ, ನೌಕರಿಯಲ್ಲಿ ಮೀಸಲು ಅನುಕೂಲವಿದೆ. ಆದರೆ ಸ್ವಂತವಾಗಿ ಬದುಕಲು ಇಷ್ಟು ಸಾಕೇ? ನಾನಾ ಉದ್ಯೋಗ-ಉದ್ಯಮಗಳಲ್ಲಿ ಸ್ವಾವಲಂಬಿಗಳಾಗಿ ಬದುಕಲು ಆಸರೆಯೂ ಅಗತ್ಯ. ಈ ಆಶಯದ ಈಡೇರಿಕೆಗೆ ಅರಸು ಕೈಗೊಂಡ ಕಾರ್ಯ ಹರಿಜನ-ಗಿರಿಜನ ಅಭಿವೃದ್ಧಿ ನಿಗಮ. ಇದೇ ಆಸರೆಯನ್ನು ಹಿಂದುಳಿದ ವರ್ಗಕ್ಕೂ ಅವರು ಕಲ್ಪಿಸಿದರು. ಚರ್ಮದ ಉದ್ಯೋಗ, ಕುರಿ ಪೋಷಣೆ, ಮೀನುಗಾರಿಕೆಗಳೆಲ್ಲ ನಾಡಿನ ಬಡಜನರ ಸ್ವಾವಲಂಬನೆಯ ಕ್ಷೇತ್ರಗಳು. ಈ ಕ್ಷೇತ್ರಗಳ ದುಡಿಮೆಗಾರರೆಲ್ಲ ಮಧ್ಯವರ್ತಿಗಳ ಪರಪೀಡನೆಗೆ ಒಳಗಾದವರು. ಈ ವರ್ಗಕ್ಕೆ ಆರ್ಥಿಕ ಸ್ವಾತಂತ್ರ್ಯ ತಂದುಕೊಡುವ ಸಾಧನಗಳಾಗಿ ಚರ್ಮೋದ್ಯಮ ಅಭಿವೃದ್ಧಿ ನಿಗಮ, ಕುರಿ—ಕುರಿ ಉತ್ಪನ್ನ ಅಭಿವೃದ್ಧಿ ಮಂಡಲಿ, ಮತ್ಸ್ಯೋದ್ಯಮ ನಿಗಮಗಳು ಅಸ್ತಿತ್ವಕ್ಕೆ ಬಂದವು. ರಾಜ್ಯದ ನಾನಾ ನಗರಗಳಲ್ಲಿ ಹುಟ್ಟಿ ಹಬ್ಬಿಕೊಂಡಿರುವ ಕೊಳೆಗೇರಿಗಳ ನಿವಾರಣೆ ಮತ್ತು ಅಲ್ಲಿನ ನಿವಾಸಿಗಳಿಗೆ ನಾಗರಿಕ ಬದುಕು ನೀಡುವ ಹೊಣೆ ಹೊತ್ತ ಕೊಳೆಗೇರಿ ನಿವಾಸಿ ಅಭಿವೃದ್ಧಿ ಮಂಡಲಿ ಅವತರಿಸಿತು. ಅರಸರ ಬಯಕೆ ಮೇಲ್ಮಟ್ಟದ್ದು; ಮಾನವೀಯ ಅನುಕಂಪ ಪ್ರೇರಿತವಾದ್ದು; ಊರ್ಧ್ವಮುಖಿಯಾಗಿಯೇ ಸಾಗಬಯಸಿದ್ದವರು ಅವರು. ನಾಡಿನ ಸಮಗ್ರ ಜನಪದದ ಅಭ್ಯುದಯವಾಗಬೇಕಾದರೆ ಅರಸು ಹಾಕಿಕೊಟ್ಟಿರುವ ಮಾರ್ಗದಲ್ಲೇ ನಡೆಯಬೇಕಾಗುತ್ತದೆಂಬುದು ಸ್ಪಷ್ಟವಾಗಿದೆ. ಕಾರಣ ದೇವರಾಜ ಅರಸರೇನು ರಾಜಕಾರಣಿಯಾಗಿರಲಿಲ್ಲ. ಮುಂಗಾಣ್ಕೆಯುಳ್ಳ ನೇತಾರರಾಗಿದ್ದರು. ನಾಳಿನದನ್ನು ಕಾಣುವ ದೃಷ್ಟಾರರೂ ಆಗಿದ್ದರು.

Sri Vidyabharathi Book Centre, Sringeri

CC-0. In Public Domain. Digitized by eGangotri

## ಸಾಲುಗಟ್ಟಿ ಬಂದ ಸಂಕಷ್ಟ

1977ರ ಲೋಕಸಭಾ ಚುನಾವಣೆಯಲ್ಲಿ ದೇವರಾಜ ಅರಸರ ಪಕ್ಷಕ್ಕೆ ರಾಷ್ಟ್ರರಂಗದಲ್ಲಿ ಭಾರಿ ಸೋಲುಂಟಾಯಿತು. ಆಡಳಿತ ಕಾಂಗ್ರೆಸ್ಸಿನ ಸರ್ವೋನ್ನತ ನಾಯಕಿ ಇಂದಿರಾ ಗಾಂಧಿಯವರೇ ಪರಾಭವಗೊಂಡರು. ಜನತಾಪಕ್ಷದ ಪ್ರಚಂಡ ಪ್ರವಾಹದಲ್ಲಿ ರಾಷ್ಟ್ರವೇ ಕೊಚ್ಚಿಕೊಂಡು ಹೋದಾಗ ಕರ್ನಾಟಕ ನಡುಗಡ್ಡೆ ಎನಿಸಿತ್ತು. 28 ಲೋಕಸಭಾ ಕ್ಷೇತ್ರಗಳ ಪೈಕಿ 2 ಸ್ಥಾನ ಮಾತ್ರ ಜನತಾಪಕ್ಷಕ್ಕೆ ದಕ್ಕಿತ್ತು. ರಾಜ್ಯದಲ್ಲಿ ಇಂದಿರಾಗಾಂಧಿಯವರ ಪಕ್ಷವನ್ನು ಸೋಲಿನಿಂದ ರಕ್ಷಿಸಿದ್ದು ಅರಸು ರಚಿಸಿದ್ದ ಅನುಕೂಲ ಜನಾಭಿಪ್ರಾಯದ ಚಕ್ರವ್ಯೂಹ. ಕೇಂದ್ರದಲ್ಲಿ ಜನತಾಪಕ್ಷ ಅಧಿಕಾರಾರೂಢವಾಯಿತು. ಜನತಾ ಸರ್ಕಾರದ ಉರಿಗಣ್ಣು ಅರಸರ ಮೇಲೆ ಬಿತ್ತು. ಅವರ ಅಧಿಕಾರದ ಬೇರು ಕೀಳಲು ವಿಚಾರಣಾ ಆಯೋಗದ ರಚನೆ ಆಯಿತು. ಇಲ್ಲಿಂದ ಒಂದೊಂದಾಗಿ ಕಷ್ಟ ಸಾಲುಗಟ್ಟಿ ಬರತೊಡಗಿದವು.

ಎಂದೂ ಅನುಭವಿಸದಿದ್ದ ಸೋಲಿನ ಕಹಿಯುಂಡು ಇಂದಿರಾ ಗಾಂಧಿ ಚುನಾವಣೆಯೆಂದರೆ ನಡುಗುವ ಸ್ಥಿತಿಯಲ್ಲಿದ್ದರು. ಅವರನ್ನು ಲೋಕಸಭೆಗೆ ಆರಿಸಿ ತಂದು, ಕುಂದಿರುವ ಆತ್ಮಸ್ಥೈರ್ಯವನ್ನು ಜಾಗೃತಗೊಳಿಸಲು ಅರಸು ಅಣಿಯಾದರು. ಚಿಕ್ಕಮಗಳೂರು ಲೋಕಸಭಾಕ್ಷೇತ್ರವನ್ನು ತೆರವು ಮಾಡಿಕೊಟ್ಟು ಸ್ಪರ್ಧಿಸಲು ಆಹ್ವಾನಿಸಿದರು. 1978ರ ನವೆಂಬರ್‌ನಲ್ಲಿ ನಡೆದ ಆ ಮರು ಚುನಾವಣೆಯು ಜಾಗತಿಕ ಗಮನ ಸೆಳೆದಿತ್ತು. ಪ್ರತಿಪಕ್ಷದ ಪ್ರಬಲ ಪಾಳಯವನ್ನು ಭೇದಿಸಿ ಇಂದಿರಾಗಾಂಧಿಯವರನ್ನು ಗೆಲುವಿನ ಸೋಪಾನಕ್ಕೆ ಏರಿಸಿದವರು ದೇವರಾಜ ಅರಸು. ಚುನಾವಣೆಯಲ್ಲಿ ಇಂದಿರಾ ಗೆಲುವಿನ ಶ್ರೇಯಸ್ಸು ಅರಸರಿಗೆ ಸಿಕ್ಕಿತು. ದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri


ವಿದೇಶಗಳಲ್ಲಿ ಅವರ ಸಾಧನೆ—ಸಂಘಟನಾಶಕ್ತಿಯ ಪ್ರಶಂಸೆ ಹಬ್ಬಿತು.

1978ರಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಕಾಲದಲ್ಲಿ ಪ್ರಬಲ ಅರಸು ಅಧಿಕಾರದಲ್ಲಿದ್ದರೆ ಅವರ ಗೆಲುವು ನಿಶ್ಚಿತ. ಅಧಿಕಾರ ತಪ್ಪಿದರೆ ಸೋಲು ಖಂಡಿತವೆಂದು ಭಾವಿಸಿದ ಕೇಂದ್ರಸರ್ಕಾರ 1977ರ ವರ್ಷಾಂತ್ಯದಲ್ಲಿ ದೇವರಾಜರ ಸರ್ಕಾರವನ್ನು ಪದಚ್ಯುತಗೊಳಿಸಿ ಚುನಾವಣೆಗೆ ಆಜ್ಞೆ ಮಾಡಿತು.

ಅರಸು ಬಿಕ್ಕಟ್ಟಿನ ಎದುರಿನಲ್ಲಿ ಧೃತಿಗೆಡದ ಧೀರ. ಬಿರುಸಿನ ಹೋರಾಟದಲ್ಲಿ ಎಂದಿನಂತೆ ಭಾರಿ ಜಯಗಳಿಸಿ ಸತತವಾಗಿ ಆರನೆಯ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ ಕೀರ್ತಿಗಳಿಸಿ ದಾಖಲೆ ಸೃಷ್ಟಿಸಿದರು. 58 ದಿನಗಳ ಅಲ್ಪವಿರಾಮದ ಬಳಿಕ ಮತ್ತೆ ಫೆಬ್ರವರಿ 28ರಂದು (1978) ಎರಡನೆಯ ಬಾರಿಗೆ ರಾಜ್ಯ ರಥದ ಮುಖ್ಯ ಸಾರಥಿಯಾಗಿ ಅಧಿಕಾರ ಪಡೆದರು.

## ಒಡೆದ ಮನಸ್ಸು

ಅರಸರ ಪ್ರಾಬಲ್ಯ, ಏರುಮುಖದಲ್ಲಿದ್ದ ಅವರ ಯಶಸ್ಸು ಕಿರಿಕಿರಿಯುಂಟುಮಾಡಿದವು. ಪ್ರದೇಶ ಕಾಂಗ್ರೆಸ್ ಹುದ್ದೆಯಿಂದ ಏಕಾಏಕಿ ಅರಸರ ಉಚ್ಚಾಟನೆ ಆಯಿತು.

1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಒಂದು ಬಾಲಿ, 1977ರಲ್ಲಿ ಆಡಳಿತ ಕಾಂಗ್ರೆಸ್ ಸಿಡಿದು ರೆಡ್ಡಿ ಕಾಂಗ್ರೆಸ್ ಮತ್ತು ಇಂದಿರಾ ಕಾಂಗ್ರೆಸ್‌ಗಳೆಂದು ಹೋಳಾದಾಗ ಎರಡನೆಬಾರಿ ಮತ್ತು 1979ರಲ್ಲಿ ಮೂರನೆ ಬಾರಿ ಕಾಂಗ್ರೆಸ್ಸಿನಿಂದ ಉಚ್ಚಾಟನೆಗೊಂಡ ವಿಕ್ರಮವೂ ಅರಸರದು. ಚಿಕ್ಕಮಗಳೂರು ಲೋಕಸಭಾ ಚುನಾವಣೆ ಇಂದಿರಾಗಾಂಧಿಯವರ ರಾಜಕೀಯ ಮರುಹುಟ್ಟಿಗೆ

Sri Vidyabharathi Book Centre, Sringeri

 CC-0. In Public Domain. Digitized by eGangotri 

ಬುನಾದಿ ಎನಿಸಿತು. ಅದೇ ಚುನಾವಣೆ ದೇವರಾಜ ಅರಸರ ಕೀರ್ತಿ ಶಿಖರದ ತುಟ್ಟತುದಿ ಎನಿಸಿ ಅಲ್ಲಿಂದ ಅವರ ಅವರೋಹಣ ಆರಂಭವಾಯಿತು.

ಇಂದಿರಾಗಾಂಧಿಯವರಿಂದ ಬೇರ್ಪಟ್ಟಮೇಲೂ ದೇವರಾಜ ಅರಸರಿಗೆ ಕಾಂಗ್ರೆಸ್ಸಿನ ವ್ಯಾಮೋಹ ತಪ್ಪಿರಲಿಲ್ಲ. 40 ವರ್ಷಗಳ ಬಾಂಧವ್ಯವನ್ನು ಕಡಿದುಕೊಳ್ಳಲು ಆಗಿರಲಿಲ್ಲ. ತಮ್ಮ ಸಂಘಟನೆಯನ್ನು ಕರ್ನಾಟಕ ಕಾಂಗ್ರೆಸ್ ಎಂದು ಕರೆದರು. ಅದನ್ನು ಆಗ ಅಧ್ಯಕ್ಷರಾಗಿದ್ದ ಸ್ವರ್ಣಸಿಂಗ್ ನೇತೃತ್ವದ ಪ್ರತಿ ಕಾಂಗ್ರೆಸ್ಸಿನ ಜತೆ ಕೂಡಿಸಿದರು. ಅದಕ್ಕೆ ತಾವೇ ಅಧ್ಯಕ್ಷರೂ ಆದರು.

## ತಪ್ಪಿದ ಅಧಿಕಾರ

1979ರ ಅಂತ್ಯದ ವೇಳೆಗೆ ಜನತಾ ಸರ್ಕಾರ ಉರುಳಿ ಅದರ ಅವಶೇಷವಾದ ಚರಣಸಿಂಹರ ನೇತೃತ್ವದ ಸಮ್ಮಿಶ್ರ ಸರ್ಕಾರವೂ ಬಾಲಾರಿಷ್ಟದಿಂದ ಕೊನೆಯುಸಿರು ಎಳೆದಾಗ ಲೋಕಸಭೆಗೆ ಚುನಾವಣೆ ಅನಿವಾರ್ಯವಾಯಿತು. 1980ರ ಲೋಕಸಭಾ ಚುನಾವಣೆಯಲ್ಲಿ ಅರಸರ ಕಾಂಗ್ರೆಸ್ಸು ರಾಜ್ಯದಲ್ಲಿ ಮಾತ್ರವಲ್ಲ, ರಾಷ್ಟ್ರವ್ಯಾಪಿಯಾಗಿ ಭಾರಿ ಸೋಲಿನ ಕಹಿಯುಂಡಿತು. ಕರ್ನಾಟಕದಲ್ಲಿ ಅರಸರ ಒಬ್ಬ ಬೆಂಬಲಿಗರೂ ಆರಿಸಿ ಬರಲಿಲ್ಲ. ಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ರಾಜ್ಯದಲ್ಲಿ 1971ರ ಸ್ಥಿತಿ ಮರುಕಳಿಸಿತು. ದೇವರಾಜರ ಅತ್ಯಂತ ನಿಕಟವರ್ತಿಗಳು, ಪರಮಾಪ್ತರಂತೆ ಸೋಗು ಹಾಕಿದ್ದವರೆಲ್ಲ ಪ್ರತಿ ಪಾಳಯಕ್ಕೆ ಪಲಾಯನ ಮಾಡಿದರು. ಒಂದು ಸಿದ್ಧಾಂತ, ನಂಬಿಕೆ ಮತ್ತು ಧ್ಯೇಯ ಸಾಧನೆಗಾಗಿ ತಮ್ಮ ನಾಯಕನಿಷ್ಠೆಯನ್ನು ಕಡೆಗಣಿಸಿ ಜನತಂತ್ರದ ಮೌಲ್ಯವನ್ನು ಉಳಿಸಲು ಹೋರಾಡಿದ ದೇವರಾಜರಿಗೆ ತಮ್ಮ ಬೆಂಬಲಿಗ

Sri Vidyabharathi Book Centre, Sringeri

CC-O. In Public Domain. Digitized by eGangotri


ರನೇಕರು ಅಳ್ಳಿದೆಯ ರಣ ಹೇಡಿಗಳೆಂಬುದು ತಿಳಿಯದಾಗಿತ್ತು. ತಿಳಿದಾಗ ಅಧಿಕಾರವನ್ನು ಬಿಡಲು ಅವರು ಅರೆ ಕ್ಷಣವೂ ವಿಳಂಬ ಮಾಡಲಿಲ್ಲ. ಬೆಂಬಲಿಗರನ್ನು ಗೋಗರೆಯಲಿಲ್ಲ. "ನಿಮಗೆಲ್ಲಿ ಹಿತವೋ, ಅಲ್ಲಿಗೆ ಹೋಗಲು ನೀವು ಸ್ವತಂತ್ರರು" ಎಂದು ಅನುವು ಮಾಡಿಕೊಟ್ಟ ನಿರ್ದೋಷಿ ಎನಿಸಿದರು.

ಆದರೂ ವಿಧಾನಸಭೆಯಲ್ಲಿ ಸಭಾನಾಯಕನ ಸ್ಥಾನಕ್ಕೆ ಬಂದು ನಿಂತ ಏಕೈಕ ವ್ಯಕ್ತಿ ದೇವರಾಜ ಅರಸು.

1979ರಲ್ಲಿ ಅಧಿಕಾರದಲ್ಲಿದ್ದಾಗಲೇ ಅರಸರನ್ನು ಅನಿಷ್ಟದ ವ್ಯಾಧಿಯೊಂದು ಹಲವು ತಿಂಗಳ ಕಾಲ ಕಾಡಿತ್ತು. ಬಿಡುವಿಲ್ಲದ ದುಡಿಮೆಯಿಂದ ಹೃದಯ ದುರ್ಬಲಗೊಂಡಿತ್ತು. ಅದರಿಂದ ಮುಕ್ತಿ ಪಡೆದು ಚೇತರಿಸಿಕೊಂಡಮೇಲೆ ತಮ್ಮದೇನಿದ್ದರೂ ಇಳಿ ಪ್ರಾಯ, ಹಿಂದಿನಂತೆ ದುಡಿಮೆ ಸಲ್ಲದೆಂದುಕೊಳ್ಳಲೇ ಇಲ್ಲ. ದೇಶ ಸಂಚಾರ, ರಾಜ್ಯದಲ್ಲಿ ಎಡಬಿಡದ ಪ್ರವಾಸ, ವಿಧಾನ ಕಲಾಪ, ಸಾರ್ವಜನಿಕ ಭಾಷಣ ಒಂದನ್ನೂ ಅವರು ಕಡಿಮೆ ಮಾಡಿಕೊಳ್ಳಲಿಲ್ಲ. ಹೀಗಾಗಿ ಅವರಿಗೆ ಅವಸಾನದ ಆತಂಕವೇ ಇರಲಿಲ್ಲ.

ಹತಚೇತನಗೊಂಡಿದ್ದ ಸ್ವರಣಸಿಂಗ್ ನೇತೃತ್ವದ ಕಾಂಗ್ರೆಸ್ಸಿಗೆ ಜೀವತುಂಬಿ, ಅದರ ಅಧ್ಯಕ್ಷರೂ ಆಗಿ ದುಡಿದಿದ್ದ ಅರಸರಿಗೆ ಪಕ್ಷದ ನಾಯಕತ್ವ ಸಾಕೆನಿಸಿತ್ತು. ರಾಜ್ಯದ ವಹಿವಾಟಿನಲ್ಲಿ ಗಮನ ವಿಡಬೇಕೆಂದು ಬೆಂಬಲಿಗರ ತಗಾದೆಯೂ ಹೆಚ್ಚಿತ್ತು. ಅಧ್ಯಕ್ಷಸ್ಥಾನ ಬಿಟ್ಟು ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕಟ್ಟಿಕೊಂಡರು. ಪಕ್ಷದ ಹಾದಿ ಹಿತಕಾರಿಯಾಗಿಲ್ಲವೆನಿಸಿದಾಗ ರಾಜ್ಯಘಟಕವನ್ನು ಅದರಿಂದ ಬೇರ್ಪಡಿಸಿ 'ಕರ್ನಾಟಕ ಕ್ರಾಂತಿರಂಗ'ವನ್ನು ಹುಟ್ಟು ಹಾಕಿದರು. ಆದರೂ ದೇವರಾಜ ಅರಸರಿಗೆ ಪ್ರಾದೇಶಿಕ ಪಕ್ಷದಲ್ಲಿ, ಅದರ ಅಭ್ಯುದಯದಲ್ಲಿ ನಂಬಿಕೆ ಇರಲಿಲ್ಲ. ಕ್ರಾಂತಿರಂಗವನ್ನು ಒಂದಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಲ್ಲೊಂದು ರಾಷ್ಟ್ರೀಯ ಪಕ್ಷದಲ್ಲಿ ಐಕ್ಯಗೊಳಿಸುವ ಅವರ ಅಪೇಕ್ಷೆಯ ಈಡೇರಿಕೆಗೆ ಕಾಲ ಅವಕಾಶ ಕೊಡಲಿಲ್ಲ.

1980ರಲ್ಲಿ ಅಧಿಕಾರ ಕಳೆದುಕೊಂಡ ದಿನಗಳಲ್ಲಿ ಅಕ್ಕರೆಯ ಮಗಳು ಆಕಸ್ಮಿಕ ಮರಣಕ್ಕೆ ಈಡಾದಳು. ಈ ಮಗಳನ್ನು ತುಂಬ ವಾತ್ಸಲ್ಯದಿಂದ ಕಾಣುತ್ತಿದ್ದ ದೇವರಾಜರಿಗೆ ಇದೊಂದು ಭಾರಿ ಆಘಾತವೆನಿಸಿತು. ಒಡಹುಟ್ಟಿದ ಏಕೈಕ ಸಹೋದರ ಕೆಂಪರಾಜರು ಕೊನೆಯುಸಿರೆಳೆದರು. ಆ ದಿನ ಅಂತ್ಯ ಸಂಸ್ಕಾರ ಮಾಡುವಾಗ "ನನಗೂ ಗಂಡು ಮಕ್ಕಳಿಲ್ಲ. ನನ್ನ ತಮ್ಮನಿಗೂ ಇಲ್ಲ. ಆದರೆ ನನಗಿಂತ ಕಿರಿಯನಾದ ಅವನು ನನಗೆ ಅಂತಿಮ ಸಂಸ್ಕಾರ ಮಾಡಬೇಕಿತ್ತು. ಆದರೆ ವಿಧಿಲೀಲೆ. ಅವನಿಗಿಂತ ಹಿರಿಯನಾಗಿ ನಾನೇ ಅವನ ಅಂತಿಮ ಸಂಸ್ಕಾರ ಮಾಡಬೇಕಿದೆ" ಎಂದು ಕಂಬನಿ ಮಿಡಿದಿದ್ದರು. ಈ ವ್ಯಾಕುಲ ಅವರ ಉತ್ಸಾಹವನ್ನು ಅಡಗಿಸಿತ್ತು. ಸೋದರ ವಿರಹದ 20 ದಿನಗಳ ಅಂತರದಲ್ಲಿ ಒಂದು ಸಂಜೆ (ಜೂನ್ 6, 1982) ಬಳಲದೆ, ಸೊರಗದೆ ಕಾಲನ ಕೈಗೆ ಸಿಕ್ಕಿದರು. ದೈನ್ಯವಿಲ್ಲದ ಜೀವನ, ನಿರಾಯಾಸದ ಮರಣಗಳೆರಡನ್ನೂ ಸಾಧಿಸಿದ ವಿರಳರ ಪಂಕ್ತಿಯಲ್ಲಿ ದೇವರಾಜರೂ ಸೇರಿದರು.

ಅಂದು ಮತ್ತು ಮರುದಿನ ದೇವರಾಜರ ಪಾರ್ಥಿವ ಶರೀರದ ದರ್ಶನಕ್ಕೆ, ಕೃತಜ್ಞತೆಯ ಕಂಬನಿಯ ಕಾಣಿಕೆಯ ಸಲ್ಲಿಕೆಗೆ ಬೆಂಗಳೂರಿನಿಂದ ಕಲ್ಲಹಳ್ಳಿಯವರೆಗೆ ಜನಪ್ರವಾಹ ಉಕ್ಕಿಹರಿಯಿತು. ರಾಜ್ಯದಲ್ಲಿ ಬೇರೆ ಯಾವುದೇ ನಾಯಕನಿಗೆ ದೊರಕದಿದ್ದ ಅದ್ದೂರಿ ಅಂತಿಮ ವಿದಾಯ ದೇವರಾಜರಿಗೆ ಸಿಕ್ಕಿತು. ಅವರು ಜನರನ್ನು ಪ್ರೀತಿಸಿದ್ದರು. ಅವರನ್ನು ಪ್ರೀತಿಸುವ ಜನಸಮುದಾಯ ಬಹುದೊಡ್ಡದಿತ್ತೆಂಬುದಕ್ಕೆ ಸಾಕ್ಷ್ಯ ಸಿಕ್ಕಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಧೀಮಂತ ನಿಲುವು

Sri Vidyabharathi Book Centre, Sringeri

CC-O. In Public Domain. Digitized by eGangotri

## ಅಸಾಮಾನ್ಯ

1971ರ ಲೋಕಸಭಾ ಚುನಾವಣೆ : ಅವರ ನೇತೃತ್ವದಲ್ಲಿ ಪಕ್ಷ 27ಕ್ಕೆ 27 ಸ್ಥಾನವನ್ನೂ ಗಳಿಸಿತ್ತು. 1980ರ ಲೋಕಸಭಾ ಚುನಾವಣೆ ಅವರ ನೇತೃತ್ವದ ಪಕ್ಷ 28ಕ್ಕೆ 28 ಸ್ಥಾನವನ್ನೂ ಕಳೆದುಕೊಂಡಿತ್ತು. ಎರಡೂ ಸನ್ನಿವೇಶಗಳಲ್ಲಿ ಅವರ ಮುಖ ಭಾವ ಒಂದೇ. ಗೆಲುವಿನಷ್ಟೇ ಸೋಲನ್ನೂ ತಾಳಿಕೊಳ್ಳುವ ಮನೋದಾರ್ಢ್ಯ ಸಿದ್ಧಿಸಿತ್ತು.

1962ರಲ್ಲಿ ಅರಸು ಅವರು ಮಂತ್ರಿಯಾದರು. ಬೆಂಗಳೂರಿನಲ್ಲಿ ವಾಸ. ಮಕ್ಕಳ ವಿದ್ಯಾಭ್ಯಾಸ ಅಗತ್ಯವಾಗಿತ್ತು. 1968ರಲ್ಲಿ ಅಧಿಕಾರ ಹೋಯಿತು. "ಮಕ್ಕಳು ಹಾಸ್ಟಲ್‌ನಲ್ಲಿ ಇರಲಿ. ನಾನು ಶಾಸಕರ ಭವನದಲ್ಲಿ ಇರುತ್ತೇನೆ. ನೀವು ಕಲ್ಲಹಳ್ಳಿಗೆ ಹೋಗಿ. ನಾಳೆಯಿಂದ ಕಾರು ಪಾರು ಒಂದೂ ಇರಲ್ಲ. ಈ ಬಿಲ್ಡಿಂಗೂ ಇಲ್ಲ" ಎಂದಾಗ ಚಿಕ್ಕಮ್ಮಣ್ಣಿ ವ್ಯಾವಹಾರಿಕ ಜಾಣ್ಮೆ ತಳೆದು "ನೀವೊಬ್ಬರು ಶಾಸಕರ ಭವನದಲ್ಲಿ ಇದ್ದರೆ ಎಷ್ಟು ಖರ್ಚು ಆಗುತ್ತೋ ಅಷ್ಟು ಕೊಡಿ. ಒಂದು ಪುಟ್ಟ ಮನೆ ಮಾಡಿ. ಬೆಂಗಳೂರಿನಲ್ಲೇ ನಿಭಾಯಿಸುತ್ತೇನೆ." ಅರಸು ಧಾರಾಳವಾಗಿ ಒಪ್ಪ ಬೇಕಾಯಿತು.

1969ರಲ್ಲಿ ಕಾಂಗ್ರೆಸ್ ವಿಭಜನೆಯಾಗಿ ದೇವರಾಜ ಅರಸು ಆರ್. ಕಾಂಗ್ರೆಸ್ಸಿನ ಅಧ್ಯಕ್ಷರಾದಾಗ ಅದೇ ಮನೆ ಕಾಂಗ್ರೆಸ್ ಕಛೇರಿ. "ಅಪ್ಪಾಜಿಗೆ ಆಗ ನಾವೇ ಪಿ. ಎ., ಟೆಲಿಫೋನ್ ಆಪರೇಟರ್ ಎಲ್ಲಾ" ಆಗಿದ್ದನ್ನು ಮಕ್ಕಳು ನೆನೆಸಿಕೊಳ್ಳುತ್ತಾರೆ. "ತಿರುಗಾಡಲು ವಾಹನವೂ ಇಲ್ಲ. ರಾಜಕೀಯ ಮಿತ್ರ ಕೊಲ್ಲೂರು ಮಲ್ಲಪ್ಪ ತಮಗೆ 'ಅಲಾಟ್' ಆಗಿದ್ದ ಕಾರ್ ಕೊಟ್ಟರು. ಅದೇ ಈಗ ನಮ್ಮ ಸಹಕಾರಿ."

Sri Vidyabharathi Book Centre, Sringeri

CC-O. In Public Domain. Digitized by eGangotri


"1969ರ ನಂತರ 'ಅಪ್ಪಾಜಿ' ತುಂಬ ಗಡಿಬಿಡಿಯಲ್ಲಿರ ಬೇಕಾಯಿತು. ಲೆಕ್ಕವಿಲ್ಲದಷ್ಟು ಓಡಾಟ, ಪ್ರವಾಸ, ಅವರು ನಮ್ಮ ಕೈಗೆ ಸಿಕ್ಕುತ್ತಿದ್ದುದೇ ಕಡಿಮೆ. ಸಿಕ್ಕಿದಾಗಲೂ ಜತೆಯಲ್ಲಿ ಹೊರಗಿನವರು. ಆದರೂ ರಾಜಕೀಯ, ಸಾಮಾಜಿಕ ಸಮಸ್ಯೆ ಗಳನ್ನು ಕುರಿತು ಚರ್ಚೆ ಮಾಡದೆ ಬಿಡುತ್ತಿರಲಿಲ್ಲ. ಅವರ ನಿಲವು – ಒಲವುಗಳನ್ನೂ ನಾವು ಟೀಕಿಸುತ್ತಿದ್ದುದುಂಟು. ಆದ್ದರಿಂದಲೇ ಯಾರಿಗಾದರೂ ನಮ್ಮ ಪರಿಚಯ ಮಾಡಿಕೊಡಬೇಕಾದಾಗ ಇವರು ಮೂವರು ನನ್ನ ಟೀಕಾಕಾರರು ಎಂದು ಹೇಳಿ ಅನಂತರ ನನ್ನ ಮಕ್ಕಳು ಅನ್ನುತ್ತಿದ್ದರು."

ಮುಖ್ಯಮಂತ್ರಿಯಾಗಿ 72 ರಿಂದ ಬಾಲಬ್ರೂಯಿಯಲ್ಲಿ ವಾಸ – 1980ರ ಆರಂಭದವರೆಗೆ. 1977ರ ಡಿಸೆಂಬರ್ 31 ರಂದು ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು. ಬಾಲ ಬ್ರೂಯಿ ಬಿಡಬೇಕಿತ್ತು. ರಾಜಕಾರಿಣಿ ಎಂದು ಹೇಳಿಕೊಂಡಾಗ ಮನೆ ಖಾಲಿ ಇದ್ದರೂ ಕೊಡಲು ಒಪ್ಪುತ್ತಿರಲಿಲ್ಲ. ಕೊನೆಗೆ ಮಗಳು ಚಂದ್ರಪ್ರಭಾ ಮತ್ತು ಅಳಿಯ ಮೋಹನರಾಜ ಅರಸು ತಮ್ಮ ಪೂರ್ವೋತ್ತರ ಹೇಳಿಕೊಳ್ಳದೆ ಬಾಡಿಗೆ ಮನೆಯೊಂದನ್ನು ಹಿಡಿದರು. ಸಣ್ಣ ಮನೆ. ಬಾಲಬ್ರೂಯಿಯಲ್ಲಿ ಸಾಕಿಕೊಂಡಿದ್ದ ದನ ಕರುಗಳನ್ನು ಅಲ್ಲೇ ಬಿಟ್ಟು ಬರಬೇಕಾಯಿತು. 78ರ ಚುನಾ ವಣೆಯಲ್ಲಿ ಪಕ್ಷಕ್ಕೆ ಗೆಲುವು ದಕ್ಕಿದಾಗ ಮತ್ತೆ ಬಾಲಬ್ರೂಯಿಗೆ ಹಿಂದಿರುಗಿದರು. 25 ದಿನಗಳ ಕಾಲ ಹೊರಗಿದ್ದರೂ ದನ, ಕರು ಮಾತ್ರ ಅಲ್ಲೇ ಇದ್ದವು.

ಇಂಥ ಕಷ್ಟ – ಸಮಸ್ಯೆಗಳಿಗೆ ನೆಮ್ಮದಿಗೆಟ್ಟವರೇ ಅಲ್ಲ ಅರಸು. 'ಹೇಗೋ ಆಗುತ್ತೆ' ಎಂಬ ಧೋರಣೆ. ಗೃಹರಂಗದಲ್ಲಿ ಅವರು ಸ್ಥಿತಪ್ರಜ್ಞ. ಜತೆಯವರಗೂಡಿ ತೃಪ್ತಿಯಿಂದ ಉಂಡು ಮಲಗುವ ಸ್ವಭಾವ. ಹಿಟ್ಟು ಸಾರು ಊಟವಾದರೂ ಒಂದೇ,

Sri Vidyabharathi Book Centre, Sringeri

CC-O. In Public Domain. Digitized by eGangotri



ಅತಿ ದೊಡ್ಡ ಅಧಿಕಾರವಿದ್ದರೇನು ತೀರ ಸಾಮಾನ್ಯನಂತೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri


ಒಬ್ಬಟ್ಟು ಪಾಯಸವಾದರೂ ಅಷ್ಟೆ. ಸಮಯ ಸಾಲದಿದ್ದಾಗ ನಿಂತೇ ಊಟ ಮುಗಿಸಿದ್ದೂ ಉಂಟು. ಸಮಯ ಇದ್ದಾಗ ಎಷ್ಟು ಜನರಿದ್ದರೆ ಅಷ್ಟೂ ಜನರ ಜತೆಗೂಡಿ ಭೋಜನ. ತಾರತಮ್ಯವನ್ನು ಸಹಿಸದ ಸ್ವಭಾವ. ಮನೆಯಲ್ಲಿ ಮೈಗೂಡಿಸಿಕೊಂಡಿದ್ದ ಈ ಸ್ಥಿತಪ್ರಜ್ಞತೆಯೇ ಅವರಿಗೆ ರಾಜಕಾರಣದಲ್ಲೂ ಸಿದ್ಧಿಸಿತ್ತು. ದುರ್ದಿನಗಳಲ್ಲಿ ಹಿಂಬಾಲಕರು ಕಂಗೆಟ್ಟು 'ಹೀಗಾಯಿತಲ್ಲ' ಎಂದು ಕೊರಗಿದರೆ "ನೀವೆಲ್ಲ ಜತೆಗಿದ್ದರೆ ಎಂಥ ಕಷ್ಟ, ಸುಮ್ಮನಿರಿ. ನೋಡೋಣ" ಎಂದು ಧೈರ್ಯ ತುಂಬುತ್ತಿದ್ದರು. ಹತ್ತು ಜನ ಹಿಂದಿದ್ದರೆ ಸಾಕು ಅವರದು ಭೀಮಬಲ. ಆದ್ದರಿಂದಲೇ "ನಾವು ಅವರ ಧೈರ್ಯ ಕೆಡಿಸುವಂತಹ ಯಾವ ಮಾತನ್ನೂ ಆಡುತ್ತಿರಲಿಲ್ಲ" ಚಂದ್ರಪ್ರಭ ಹೇಳಿದ ಮಾತಿದು.

ದೇವರಾಜರನ್ನು ಉಳಿದೆಲ್ಲರಿಗಿಂತ ಆತ್ಮೀಯವಾಗಿ ಬಲ್ಲ ಕುಟುಂಬ ವರ್ಗದ ಪ್ರಕಾರ ಅವರ ಅವನತಿಯ ಅಂಕುರ 1976 ರಲ್ಲಿ. ಪ್ರಾಯದ ದಿನಗಳಿಂದ ಆರಂಭಿಸಿ ಆಂಗಸಾಧನೆ ಮಾಡುತ್ತ ಅತ್ಯುತ್ತಮ ದೇಹದಾರ್ಢ್ಯ ಪಡೆದಿದ್ದ ದೇವರಾಜರು ಆಗೊಮ್ಮೆ ಆಂಗಸಾಧನೆ ಮಾಡುವಾಗ ಆಯ ತಪ್ಪಿದರು. ಬೆನ್ನು ನೋವಿನಲ್ಲಿ ಅದು ಪರ್ಯವಸಾನಗೊಂಡಿತು. ಆಗ ಅವರಿಗೆ ವಯಸ್ಸು 61 ದಾಟಿತ್ತು. ವೃದ್ಧಾಪ್ಯದ ಲಕ್ಷಣ. ದೇಹಶಕ್ತಿ ಕುಸಿಯತೊಡಗಿತ್ತು. ಸಮಯ ಸಾಧಕರು "ಇದು ಯಾರೋ ಮಾಡಿಸಿರುವ ಮಾಟ" ವೆಂದು ತಲೆಗೆ ತುಂಬಿದರು, ಪೂಜೆ ಪುನಸ್ಕಾರ, ಹೋಮಗಳ ಹೆಸರಿನಲ್ಲಿ ಹಿರಿದರು. ಅಪರಿಪಕ್ವ ಜ್ಯೋತಿಷಿಗಳ ಅವಾಂತರ ಆರಂಭವಾಯಿತು.

"ನೀವು ಪೂಜೆ ಪುನಸ್ಕಾರ ಮಾಡ್ತೀರಲ್ಲ, ಅದರ ಪುಣ್ಯ ನಿಮಗೆ ಬರುತ್ತಲ್ಲ, ಅದರಲ್ಲಿ ಅರ್ಧ ಭಾಗ ನಂದು" ಎಂದು ಜನ ಸೇವೆಯಲ್ಲಿ ತೊಡಗಿದ್ದು "ನಾನು ಮೂಗು ಹಿಡಿದು ಕೂರಲಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ನನ್ನ ದೇನಿದ್ದರೂ ಮಾನಸಿಕ ಪೂಜೆ" ಎಂದು ಓಡಾಡಿಕೊಂಡಿದ್ದವರು ಪೂಜೆ ಪುನಸ್ಕಾರಗಳಿಗೆ ಮಣಿದರು. ದೇಹಶಕ್ತಿಯು ಇಳಿತಕ್ಕೆ ತಕ್ಕ ಹಾಗೆ ಮನಃಶಕ್ತಿಯೂ ಇಳಿಯತೊಡಗಿತ್ತು. ಅವರ ಆತ್ಮ ಬಲ ಕುಗ್ಗತೊಡಗಿತ್ತು.

"ಯಾಕೆಂದರೆ ಅವರಾಗಿ ಆಲೋಚಿಸಿ ನಿರ್ಧರಿಸಿದ ಯಾವುದರಲ್ಲೂ ಅವರು ವಿಫಲವಾದ್ದೇ ಇಲ್ಲ. ಹೆರವರನ್ನು ನಂಬಿ ನಡೆದಾಗ ಸೋಲಿನ ಮೇಲೆ ಸೋಲು ಕಾಣಬೇಕಾಯಿತು."

ಸಾರ್ವಜನಿಕವಾಗಿ ಕೋಪ ತಾಪಗಳನ್ನು, ಆವೇಶಗಳನ್ನು ಪ್ರದರ್ಶಿಸುತ್ತಿದ್ದ ದೇವರಾಜ ಅರಸು ಮನೆಯಲ್ಲಿ "ಹಿರಿಯ ಮಗು" ಮಾತ್ರ. ಆದರೂ ಅವರು ರೋಷಾವಿಷ್ಟರಾಗಿದ್ದ ಎರಡು ಸಂದರ್ಭಗಳನ್ನು ಕುಟುಂಬದ ಜನರು ಗುರ್ತಿಸಿದ್ದಾರೆ.

1979ರಲ್ಲಿ ಅನಾರೋಗ್ಯದಿಂದ ಬಳಲುತಿದ್ದು ಸರ್ಪಸುತ್ತಿನ ವ್ಯಾಧಿಯ ಯಾತನೆ ಅನುಭವಿಸುತ್ತಿದ್ದಾಗ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಯನ್ನು ಬಿಟ್ಟುಕೊಡುವ ಮಾತು ಹೇಳಿದ್ದರೂ, ಕಾಲಾವಕಾಶ ಕೊಡದೆ ಇಂದಿರಾಗಾಂಧಿಯವರು ದೇವರಾಜರನ್ನು ಕಾಂಗ್ರೆಸ್ಸಿನಿಂದ (ಐ) ಹೊರದೂಡಿದ ಸಂದರ್ಭ.

ಬಾಯಿಂದ ಒಸರುತ್ತಲೇ ಇದ್ದ ರಕ್ತಕಣಗಳಿದ್ದ ಜೊಲ್ಲನ್ನೂ ಲೆಕ್ಕಿಸದೆ ಇಂದಿರಾಗಾಂಧಿಯವರಿಗೆ ಬರೆಸಿದ ದೀರ್ಘ ಪ್ರತ್ಯುತ್ತರ: "ನಾನು ತಪ್ಪೆಸಗಿದ್ದರೆ ಜನತೆ ಶಿಕ್ಷಿಸಲಿ. ಇದೇನಿದು ಅಕ್ರಮ"ವೆಂದು ಕೆರಳಿ ನೋವನ್ನೂ ಲೆಕ್ಕಿಸದೆ ಪತ್ರದ ಒಕ್ಕಣೆಯನ್ನು ಹೇಳುತ್ತಿದ್ದಾಗ ಅವರ ಮುಖದಲ್ಲಿ ಅಸಾಧಾರಣ ದೇಹಶ್ರಮ ಮತ್ತು ಹೆಪ್ಪುಗಟ್ಟಿದ್ದ ಅಸಮಾಧಾನ ಸ್ಪಷ್ಟವಾಗಿ ಕಾಣುತ್ತಿತ್ತು. "ಅವರು ಅಷ್ಟೊಂದು ರೇಗಿದ್ದು ಆಗಲೇ. ಇನ್ನೊಂದು ಬಾರಿ 1980ರಲ್ಲಿ. ಸಜ್ಜನರು, ಆತ್ಮೀಯರು ಎಂದು ಅಪ್ಪಾಜಿ ಭಾವಿಸಿದ್ದ ಗೆಳೆಯರೊಬ್ಬರು ಸ್ನೇಹತ್ಯಾಗ ಮಾಡಿದಾಗ.

Sri Vidyabharathi Book Centre, Sringeri

CC-O. In Public Domain. Digitized by eGangotri


ಆಜೀವನ 'ಕಾಯಕವೇ ಕೈಲಾಸ' ವೆಂದು ಜಪಿಸುತ್ತಿದ್ದ 'ಅಪ್ಪಾಜಿ' ಕಣ್ಮುಚ್ಚಿದ ದಿನವೂ ಗಂಟೆಗಟ್ಟಲೆ ಪ್ರತಿ ಪಕ್ಷಗಳ ಐಕ್ಯದ ವ್ಯೂಹ ರಚನೆಯಲ್ಲೇ ತಲ್ಲೀನರಾಗಿದ್ದರು. ಅದು ಅವರ ಜನಸೇವಾ ಪರಾಯಣತೆ—ಎಂಬುದು ಕುಟುಂಬದ ಸದಸ್ಯರಲ್ಲಿ ನೆಲೆಯಾಗಿ ನಿಂತಿರುವ ಭಾವ.

ದೇವರಾಜ ಅರಸು ಧೂಮಕೇತುವಿನಂತೆ ಹಠಾತ್ತನೆ ಬಂದು ಕಣ್ಣು ಕೋರೈಸುವಂತೆ ಮಾಡಿ ಮಾಯವಾದ ರಾಜಕಾರಣಿ ಅಲ್ಲ. ದೀರ್ಘಕಾಲದ ಅನುಭವ, ಅನುಗಮನಗಳಿಂದ ಹಂತ ಹಂತವಾಗಿ ಮೇಲೇರಿದ ಮುತ್ಸದ್ದಿ. ಅವಕಾಶಕ್ಕಾಗಿ ಹಂಬಲಿಸದೆ, ಓಲೈಸದೆ, ಎಲ್ಲವನ್ನೂ ಎಚ್ಚರಗಣ್ಣಿನಿಂದ ನೋಡುತ್ತ, ತನಗೆ ಸರಿ ಎನಿಸಿದ್ದನ್ನು, ನಿರ್ಭೀತಿಯಿಂದ ನುಡಿಯುತ್ತ ನಾಯಕನ ಪಂಕ್ತಿಗೇರಿದರು. ಕಾಲ ಪಕ್ವವಾದಾಗ ಕಡಿವಾಣವನ್ನು ಕೈಗೆತ್ತಿಕೊಂಡರು. ಅಧಿಕಾರ ಸಿಕ್ಕಿದ ಮೇಲೆ ಅದನ್ನು ತಮ್ಮ ಆಶೋತ್ತರಗಳನ್ನು ಸಾಕಾರಗೊಳಿಸುವ ಸಾಧನವನ್ನಾಗಿ ಬಳಸಿದರು. ಅನುಕಂಪ ತುಂಬಿದ ಅವರ ಹೃದಯಕ್ಕೆ ದೀನ-ದಲಿತ-ಅಸಹಾಯಕ-ನಿರ್ಬಲರ ಏಳ್ಗೆ, ಆ ಜನಸಮುದಾಯಕ್ಕೆ ಅಧಿಕಾರ ನೀಡಿಕೆ ತುಂಬ ಪ್ರಿಯವಾದ ಕಾರ್ಯವೆನಿಸಿದ್ದವು. ಅವರನ್ನು ಅವರ ಸಾಧನೆಗಳ ಮಾನದಿಂದಲೇ ಅಳೆದರೂ ಅವರೊಬ್ಬ ಅಸಾಮಾನ್ಯ. ಆದರೆ ಸಾಧಿಸಲಾಗದೆ ಚಿಂತನೆಯ ಹಂತದಲ್ಲೇ ಉಳಿದ ಅವರ ಹೆಬ್ಬಯಕೆಗಳ ಮಾನದಲ್ಲಿ ಅಳೆದಾಗ ಮಹಾಪುರುಷ. ಅರಸರ ಕ್ಷಾತ್ರವೂ ಅಸಾಧಾರಣ. ಕೆರಳಿಸಿದಾಗ ಅವರ ಮಾತುಗಳು ಭಾವಪರವಶವಾಗದೆ ವಾಸ್ತವ ನೆಲೆಯಿಂದ ಚಿಮ್ಮಿದ ಕೂರಂಬುಗಳೆನಿಸುತ್ತಿದ್ದವು. ಪ್ರತಿವಾದವನ್ನೂ ತಾಳ್ಮೆಯಿಂದ ಕೇಳುವ ಮತ್ತು ಅದನ್ನು ಕತ್ತರಿಸಿ ತುಂಡುಮಾಡುವ ವಾದಚಾತುರ್ಯ ಅವರಿಗೆ ಸಿದ್ಧಿಸಿದ್ದ ಕಲೆ. ದೇಸಿ, ಗಾದೆಗಳು, ರಾಮಾಯಣ ಮಹಾಭಾರತದ ಪ್ರಸಂಗ

Sri Vidyabharathi Book Centre, Sringeri

CC-O. In Public Domain. Digitized by eGangotri



ಅಂತಿಮಯಾತ್ರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ಸಮಯೋಚಿತ ಉಲ್ಲೇಖಗಳಿಂದ ಭಾರಿ ಜನಮನವನ್ನು ಸೂರೆಗೊಳ್ಳುವ ವಾಚಾಳಿಯಾಗಿದ್ದರು. ವೇದಾಂತದಲ್ಲಿ ಆಸಕ್ತಿ —ವಿಜ್ಞಾನದಲ್ಲಿ ಒಲವು, ಧರ್ಮದಲ್ಲಿ ಶ್ರದ್ಧೆ, ಆಧುನಿಕ ವಿಚಾರ ಗಳಲ್ಲಿ ನಂಬಿಕೆ, ದರ್ಪದ ನಡೆನುಡಿ, ಸರಳ ಮನೋಭಾವ; ಶೀಘ್ರ ಕೋಪ—ಅಷ್ಟೇ ಶೀಘ್ರವಾಗಿ ತಾಳ್ಮೆಯಿಂದ ನೋಡುವ ಮನಸ್ಸು, ಹೊಂದಿದ್ದ ದೇವರಾಜ ಅರಸು ಅಪರೂಪ ವ್ಯಕ್ತಿಗಳೆನಿಸಿದ್ದರು. ಲೋಕಾನುಭವ, ಔದಾರ್ಯ, ಆಡಳಿತ ಪರಿಣತಿಗಳ ಸಮ ಮಿಶ್ರಣದ ವ್ಯಕ್ತಿತ್ವ ಅವರದಾಗಿತ್ತು. ಕರ್ನಾಟಕದ ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳಂತೂ ದೇವರಾಜರ ಮಹದುಪಕಾರವನ್ನು ಮರೆಯುವುದು ಅಸಾಧ್ಯ, ಅಸಾಧು.

ಶೋಕ ತುಂಬಿದ ವಿಧಾನಸಭೆಯಲ್ಲಿ ಅರಸರ ಒಂದು ಕಾಲದ ಹಿಂಬಾಲಕರೊಬ್ಬರು "ಅವರು ಸದನಕ್ಕೆ ಈ ಕಡೆಯಿಂದಲೇ (ಆಡಳಿತ ಪಕ್ಷ) ಪ್ರವೇಶಿಸಲಿ ಆ ಕಡೆ (ಪ್ರತಿಪಕ್ಷ) ಯಿಂದಲೇ ಪ್ರವೇಶಿಸಲಿ, ಅದೊಂದು ಜಂಬೂಸವಾರಿಯ ವೈಭವವನ್ನು ನೆನಪಿಗೆ ತರುತ್ತಿತ್ತು. ಆ ಠೀವಿ, ಗಾಂಭೀರ್ಯಗಳು ಇಲ್ಲದೆ ಈ ಸದನ ಮೆರುಗು ಕಳೆದುಕೊಂಡಿದೆ" ಎಂದ ಮಾತು ತುಂಬ ಅರ್ಥಪೂರ್ಣ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri




Sri Vidyabharathi Book Centre, Sringeri

507